



# ಆನಂದ ಕೋ–ಆಪರೇಟಿವ್ ಬ್ಯಾಂಕ್ ಲಿ.


ನಂ.116, 1ನೇ ಮಹಡಿ, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020

ದೂರವಾಣಿ: 23447829 / 23468214, web: www.acobl.com


# 44ನೇ ವಾರ್ಷಿಕ ಸಾಮಾನ್ಯ ಸಭೆ

**07-09-2025ನೇ ಭಾನುವಾರ**

**ಬೆಳಿಗ್ಗೆ 10–00 ಘಂಟೆಗೆ**

ಶ್ರೀ. ಆದಿಚುಂಚನಗಿರಿ ಸಮುದಾಯ ಭವನ, ಹೊಸಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ,
ವಿಜಯನಗರ, ಬೆಂಗಳೂರು – 560 040.





ಶ್ರೀ. ದೊಡ್ಡೀರಯ್ಯ ಸಿ.
ಅಧ್ಯಕ್ಷರು

ANANDA CO-OPERATIVE BANK LTD.
BANGALORE - 20



ಶ್ರೀ. ರುದ್ರಯ್ಯ ಕೆ. ಎಸ್.
ಉಪಾಧ್ಯಕ್ಷರು



ಶ್ರೀ. ಸಿದ್ದರಾಜ ಎಸ್.
ನಿರ್ದೇಶಕರು



ಶ್ರೀ. ಚಂದ್ರಶೇಖರಯ್ಯ
ನಿರ್ದೇಶಕರು



ಶ್ರೀ. ಸಿದ್ದರಾಜು ಸಿ.
ನಿರ್ದೇಶಕರು



ಶ್ರೀ. ಪುಟ್ಟಮಾದಯ್ಯ ಬಿ.
ನಿರ್ದೇಶಕರು



ಶ್ರೀ. ನಂದಕುಮಾರ್ ಎಂ. ಸಿ.
ನಿರ್ದೇಶಕರು



ಡಾ|| ರಾಜ ಜೆ.
ನಿರ್ದೇಶಕರು



ಶ್ರೀ. ರಾಚಯ್ಯ ಸಿ.
(ಪ. ಜಾ. ಮೀ.) ನಿರ್ದೇಶಕರು



ಡಾ|| ಪ್ರಶಾಂತ್ ಪಿ.
(ಪ. ಪ ಮೀ) ನಿರ್ದೇಶಕರು



ಶ್ರೀಮತಿ. ಅರುಂಧತಿ ಎಲ್.
(ಮಹಿಳಾ ಮೀ.) ನಿರ್ದೇಶಕರು



ಶ್ರೀ. ಧನಂಜಯ ಕೆ. ಹೆಚ್.
(ಹಿ. ಮೀ) ನಿರ್ದೇಶಕರು



ಶ್ರೀ. ಕೇಶವ ರಾವ್
(ಹಿ. ಮೀ) ನಿರ್ದೇಶಕರು



ಶ್ರೀ. ಸಿ. ಮಹದೇವಯ್ಯ
ವೃತ್ತಿಪರ ನಿರ್ದೇಶಕರು



ಶ್ರೀ. ಸಿ.ಎಸ್. ಪುಟ್ಟರಾಜು
ವೃತ್ತಿಪರ ನಿರ್ದೇಶಕರು



ಶ್ರೀ ಕೆ. ಜನಾರ್ಧನ
ಮುಖ್ಯ ಕಾರ್ಯ
ನಿರ್ವಹಣಾಧಿಕಾರಿ



ಶ್ರೀ ಹೆಚ್.ಎಸ್. ಸತ್ಯನಾರಾಯಣ
ಸಲಹೆಗಾರರು

# ಆನಂದ ಕೋ-ಆಪರೇಟಿವ್ ಬ್ಯಾಂಕ್ ಲಿ.

## ಬ್ಯಾಂಕಿನ ಸಂಸ್ಥಾಪಕರು

1. ಶ್ರೀ ಎಸ್. ಪುಟ್ಟಸ್ವಾಮಿ
2. ಶ್ರೀ ಎಲ್. ಶಿವಲಿಂಗಯ್ಯ
3. ಡಾ॥ ಎನ್.ಟಿ. ಮೋಹನ್
4. ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ
5. ಶ್ರೀ ಪಿ.ಎಲ್. ನಂಜುಂಡ ಸ್ವಾಮಿ
6. ಶ್ರೀ ಸಿ.ಡಿ. ಆದಿನಾರಾಯಣ
7. ಶ್ರೀ ಎಸ್. ಗುರಪ್ಪಾಜಿ
8. ಶ್ರೀ ಎ.ಡಿ. ಕುಬೇರಪ್ಪ
9. ಶ್ರೀ ಹೆಚ್.ಎಸ್. ಶಿವಸ್ವಾಮಿ
10. ಶ್ರೀ ಬಿ. ಗೋಪಾಲಯ್ಯ
11. ಶ್ರೀ ಡಿ.ಆರ್. ನಂಜಯ್ಯ
12. ಶ್ರೀ ಎಸ್. ನಂಜಯ್ಯ
13. ಶ್ರೀ ಎಂ.ಕೆ. ಕೆಂಪಸಿದ್ದಯ್ಯ
14. ಶ್ರೀ ಕೆ.ಎಲ್. ಜಯಶಂಕರ್
15. ಶ್ರೀ ಕೆ. ದೊಡ್ಡವೀರಯ್ಯ

## ಕಾರ್ಯ ನಿರ್ವಾಹಕ ಮಂಡಲಿ

| | | |
|---|---|---|
| 1. | ಶ್ರೀ. ದೊಡ್ಡೀರಯ್ಯ ಸಿ. | ಅಧ್ಯಕ್ಷರು |
| 2. | ಶ್ರೀ. ರುದ್ರಯ್ಯ ಕೆ. ಎಸ್. | ಉಪಾಧ್ಯಕ್ಷರು |
| 3. | ಶ್ರೀ. ಸಿದ್ದರಾಜ ಎಸ್. | ನಿರ್ದೇಶಕರು |
| 4. | ಶ್ರೀ. ಚಂದ್ರಶೇಖರಯ್ಯ | ನಿರ್ದೇಶಕರು |
| 5. | ಶ್ರೀ. ಸಿದ್ದರಾಜು ಸಿ. | ನಿರ್ದೇಶಕರು |
| 6. | ಶ್ರೀ. ಪುಟ್ಟಮಾದಯ್ಯ ಬಿ. | ನಿರ್ದೇಶಕರು |
| 7. | ಶ್ರೀ. ನಂದಕುಮಾರ್ ಎಂ. ಸಿ. | ನಿರ್ದೇಶಕರು |
| 8. | ಡಾ॥ ರಾಜ ಜೆ. | ನಿರ್ದೇಶಕರು |
| 9. | ಶ್ರೀ. ರಾಚಯ್ಯ ಸಿ. | (ಪ. ಜಾ. ಮೀ.) ನಿರ್ದೇಶಕರು |
| 10. | ಡಾ॥ ಪ್ರಶಾಂತ್ ಪಿ. | (ಪ. ಪ. ಮೀ.) ನಿರ್ದೇಶಕರು |
| 11. | ಶ್ರೀಮತಿ ಅರುಂಧತಿ ಎಲ್. | (ಮಹಿಳಾ ಮೀ.) ನಿರ್ದೇಶಕರು |
| 12. | ಶ್ರೀ. ಧನಂಜಯ ಕೆ. ಹೆಚ್. | (ಹಿ. ಮೀ.) ನಿರ್ದೇಶಕರು |
| 13. | ಶ್ರೀ. ಕೇಶವ ರಾವ್ | (ಹಿ. ಮೀ.) ನಿರ್ದೇಶಕರು |
| 14. | ಶ್ರೀ. ಸಿ. ಮಹದೇವಯ್ಯ | ವೃತ್ತಿಪರ ನಿರ್ದೇಶಕರು |
| 15. | ಶ್ರೀ. ಸಿ.ಎಸ್. ಪುಟ್ಟರಾಜು | ವೃತ್ತಿಪರ ನಿರ್ದೇಶಕರು |
| 16. | ಶ್ರೀ. ಕೆ. ಜನಾರ್ಧನ | ಮುಖ್ಯ ಕಾರ್ಯ ನಿರ್ವಹಣಾಧಿಕಾರಿ |
| 17. | ಶ್ರೀ. ಹೆಚ್.ಎಸ್. ಸತ್ಯನಾರಾಯಣ | ಸಲಹೆಗಾರರು |



Meditate.

Live purely. Be quiet.

Do your work with mastery.

Like the moon, come out

from behind the clouds!

Shine

— Siddhārtha Gautama

ಸ್ಥಾಪನೆ: 1979

ಫೋನ್: ಪ್ರ.ಕ. : 2344 7829
ಬಸವೇಶ್ವರನಗರ ಶಾಖೆ : 2350 1843
ಎ.ಎಂ.ಸಿ. ಶಾಖೆ : 2365 8484
ಶೇಷಾದ್ರಿಪುರಂ ಶಾಖೆ : 2346 8214

# ಆನಂದ ಕೋ-ಆಪರೇಟಿವ್ ಬ್ಯಾಂಕ್ ಲಿ.

ಆಡಳಿತ ಕಛೇರಿ, ನಂ.116, 1ನೇ ಮಹಡಿ, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020www.acobl.com
email: anandacb_1979@yahoo.com, headoffice@acobl.com
✆ ಪ್ರ.ಕ.: 2344 7829, ಬಸವೇಶ್ವರನಗರ: 2350 1843, ಹೆಚ್.ಬಿ.ಆರ್. 2365 8484 ಶೇಷಾದ್ರಿಪುರಂ: 2346 8214

## 44ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾಪತ್ರ

ಮಾನ್ಯ ಸದಸ್ಯರೇ,

ದಿನಾಂಕ 07–09–2025ನೇ ಭಾನುವಾರದಂದು ಬೆಳಿಗ್ಗೆ 10–00 ಘಂಟೆಗೆ ಸರಿಯಾಗಿ 2024–25ರ 44ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಈ ಕೆಳಗಿನ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವ ಸಲುವಾಗಿ ಕರೆಯಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಬೇಕಾಗಿ ಈ ಮೂಲಕ ವಿನಂತಿ.

**ಸ್ಥಳ : ಶ್ರೀ. ಆದಿಚುಂಚನಗಿರಿ ಸಮುದಾಯ ಭವನ, ಹೊಸಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ, ವಿಜಯನಗರ, ಬೆಂಗಳೂರು – 560 040.**

ಅಧ್ಯಕ್ಷತೆ : **ಶ್ರೀ ದೊಡ್ಡೀರಯ್ಯ** ಸಿ., ಅಧ್ಯಕ್ಷರು

## ವಿಷಯಗಳು

1. ಪ್ರಾರ್ಥನೆ
2. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಸಂತಾಪ ಸೂಚಿಸುವುದು.
3. ಅಧ್ಯಕ್ಷರಿಂದ ಸ್ವಾಗತ ಭಾಷಣ.
4. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವುದು.

5. 2024–25ನೇ ಸಾಲಿನ 44ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.

6. ದಿನಾಂಕ 22–09–2024 ರಂದು ನಡೆದ 2023–24ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಗಳನ್ನು ಓದಿ ಧೃಡೀಕರಿಸುವುದು.

7. 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.

8. 2024–2025ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಅಂಗೀಕರಿಸುವುದು ಹಾಗೂ ಲೆಕ್ಕ ಪರಿಶೋಧಕರ ವರದಿಗೆ ಆಡಳಿತ ಮಂಡಲಿಯು ಕೊಟ್ಟಿರುವ ಸಮಜಾಯಿಷಿಗಳನ್ನು ಅಂಗೀಕರಿಸುವುದು.

9. 2024–25ನೇ ಸಾಲಿನ ಲಾಭದ ವಿಂಗಡಣೆ ಹಾಗೂ ವಿತರಣೆಯನ್ನು ಅಂಗೀಕರಿಸುವುದು.

10. 2025–26ನೇ ಸಾಲಿಗೆ ಆಡಳಿತ ಮಂಡಲಿ ಮಂಡಿಸಿರುವ ಅಂದಾಜು ಆಯ–ವ್ಯಯಗಳನ್ನು ಅಂಗೀಕರಿಸುವುದು ಮತ್ತು 2024–2025ನೇ ಸಾಲಿನ ಅಂದಾಜಿಗಿಂತ ಹೆಚ್ಚುವರಿಯಾಗಿರುವ ಖರ್ಚುಗಳನ್ನು ಅಂಗೀಕರಿಸುವುದು.

11. 2024–25ನೇ ಸಾಲಿನ ಲೆಕ್ಕ ಪರಿಶೋಧನೆ ಮಾಡಿದ ಲೆಕ್ಕಪರಿಶೋಧಕರ ನೇಮಕವನ್ನು ಅನುಮೋದಿಸುವುದು ಮತ್ತು 2025–26ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು.

12. ಸದಸ್ಯರಿಂದ ಬಂದ ಸಲಹೆಗಳು ಮತ್ತು ವಿಷಯಗಳ ಪರಿಶೀಲನೆ.

13. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸ ಬಹುದಾದ ಇತರ ವಿಷಯಗಳು.

14. ವಂದನಾರ್ಪಣೆ.

ಸ್ಥಳ: ಬೆಂಗಳೂರು
ದಿನಾಂಕ: 08–08–2025

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
**ಕೆ. ಜನಾರ್ಧನ**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

## ವಿಶೇಷ ಸೂಚನೆ

1. 2024–25ನೇ ಸಾಲಿನ ಎಸ್.ಎಸ್.ಎಲ್.ಸಿ. State & ICSC Syllabus (ಶೇ 90% ಮತ್ತು ಅದಕ್ಕಿಂತ ಹೆಚ್ಚು), SSLC CBSE Syllabus (ಶೇ 70% ಮತ್ತು ಅದಕ್ಕಿಂತ ಹೆಚ್ಚು), 2ನೇ ಪಿ.ಯು.ಸಿ. ಪರೀಕ್ಷೆಯಲ್ಲಿ (ಶೇ 80% ಮತ್ತು ಅದಕ್ಕಿಂತ ಹೆಚ್ಚು) ಡಿಪ್ಲೊಮ ಮತ್ತು ಪದವಿ (ಶೇ 75% ಮತ್ತು ಅದಕ್ಕಿಂತ ಹೆಚ್ಚು) ಮತ್ತು ಪದವಿ ಸ್ನಾತಕೋತ್ತರ ಪರೀಕ್ಷೆಗಳಲ್ಲಿ (ಶೇ 70% ಮತ್ತು ಅದಕ್ಕಿಂತ ಹೆಚ್ಚು) ಅಂಕಗಳನ್ನುಗಳಿಸಿ ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ನಮ್ಮ ಬ್ಯಾಂಕಿನ ಮಹಾಸಭೆಯಲ್ಲಿ ಬಹುಮಾನ ನೀಡಿ ಪ್ರತಿಭಾ ಪುರಸ್ಕಾರ ನೀಡಲಾಗುವುದು. (ವಿದ್ಯಾರ್ಥಿಗಳು ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯತಕ್ಕದ್ದು) ಸದಸ್ಯರುಗಳ ಮಕ್ಕಳು ಈ ಪುರಸ್ಕಾರಕ್ಕೆ ಅರ್ಹರಾಗಿದ್ದರೆ ದೃಢೀಕೃತ ಅಂಕಪಟ್ಟಿ ಮತ್ತು ಮಕ್ಕಳ ಭಾವಚಿತ್ರವನ್ನು ಬ್ಯಾಂಕಿನಿಂದ ಪಡೆದ ನಿಗದಿತ ನಮೂನೆಯೊಂದಿಗೆ ಲಗತ್ತಿಸಿ ದಿನಾಂಕ 06–09–2025ರೊಳಗೆ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾದಿಕಾರಿ ಯವರಲ್ಲಿ ಹೆಸರು ನೊಂದಾಯಿಸಿಕೊಳ್ಳಲು ಕೋರಲಾಗಿದೆ.

2. ಸದಸ್ಯರುಗಳು ಹಾಜರಿ ಪುಸ್ತಕದಲ್ಲಿ ಸಹಿ ಹಾಕಿ, ಸದಸ್ಯತ್ವದ ಸಂಖ್ಯೆ ಮತ್ತು ವಿಳಾಸ ಬದಲಾವಣೆ ಇದ್ದಲ್ಲಿ ಅದನ್ನು ನಮೂದಿಸತಕ್ಕದ್ದು,

3. ಷೇರು ಹಣ ರೂ.1,000/–ಕ್ಕಿಂತ ಕಡಿಮೆ ಇರುವ ಸದಸ್ಯರುಗಳು ತಮ್ಮ ಷೇರುಗಳನ್ನು ಕಡ್ಡಾಯವಾಗಿ ಕನಿಷ್ಠ ರೂ 1,000/–ಗಳಿಗೆ ಹೆಚ್ಚಿಸಿಕೊಳ್ಳ ಬೇಕೆಂದು ಈ ಮೂಲಕ ಕೋರಲಾಗಿದೆ.

4. ಷೇರು Certificate ಪಡೆಯದೇ ಇರುವ ಸದಸ್ಯರುಗಳು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಬಂದು ಪಡೆದು ಕೊಳ್ಳಬೇಕಾಗಿ ವಿನಂತಿಸಲಾಗಿದೆ.

5. ಸಭೆಯಲ್ಲಿ ಭಾಗವಹಿಸಲು ಬ್ಯಾಂಕಿನಿಂದ ಪಡೆದಿರುವ ನಿಮ್ಮ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು. ಗುರುತಿನ ಚೀಟಿಯನ್ನು ಪಡೆಯದೇ ಇರುವ ಸದಸ್ಯರುಗಳು ಇತ್ತೀಚಿನ ಭಾವಚಿತ್ರಗಳನ್ನು ಬ್ಯಾಂಕಿಗೆ ಕೊಟ್ಟು ಸಾಮಾನ್ಯ ಸಭೆಯ ದಿನಾಂಕಕ್ಕೆ 2 ದಿನ ಮೊದಲು ಗುರುತಿನ ಚೀಟಿಯನ್ನು ಬ್ಯಾಂಕಿನ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬೇಕಾಗಿ ವಿನಂತಿ.

6. ಸದಸ್ಯರುಗಳು ವಾರ್ಷಿಕ ವರದಿ ಪುಸ್ತಕವನ್ನು ಬ್ಯಾಂಕಿನ ಕೆಲಸದ ವೇಳೆಯಲ್ಲಿ ದಿನಾಂಕ 22–08–2025 ರಿಂದ ಪಡೆದು ಸಭೆಗೆ ಬರುವಾಗ ಜೊತೆಯಲ್ಲಿ ತರಬೇಕಾಗಿ ಕೋರಲಾಗಿದೆ, ಬ್ಯಾಂಕಿಗೆ ಬರಲು ಸಾದ್ಯವಾಗದ ಸದಸ್ಯರು ಬ್ಯಾಂಕಿನ ವೆಬ್ ಸೈಟ್:

www.acobl.com ಗೆ ಬೇಟಿ ನೀಡಿ ವಾರ್ಷಿಕ ವರದಿ ಪುಸ್ತಕವನ್ನು download ಮಾಡಿಕೊಳ್ಳತಕ್ಕದ್ದು.

7. ಚರ್ಚೆಗಾಗಿ ಸೂಚಿಸುವ ವಿಷಯಗಳನ್ನು ತಾ॥ 06-09-2025ಕ್ಕೆ ಮುಂಚಿತವಾಗಿ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರಿಗೆ ಲಿಖಿತ ಮುಕೇನ ಕಳುಹಿಸಬೇಕೆಂದು ಕೋರಲಾಗಿದೆ. ಆ ನಂತರ ಬಂದ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ. ಚರ್ಚೆಗೆ ಸೂಚಿಸುವ ವಿಷಯಗಳು ಸಹಕಾರಿ ಕಾನೂನು ಮತ್ತು ಬ್ಯಾಂಕಿನ ಉಪ-ನಿಯಮಗಳ ಚೌಕಟ್ಟಿನೊಳಗಿರಬೇಕು..(ಮನವಿ ನೀಡದ ಹೊರತು ಸಭೆಯಲ್ಲಿ ಮಾತನಾಡಲು ಅವಕಾಶವಿರುವುದಿಲ್ಲ)

8. ಬ್ಯಾಂಕಿನ ಸದಸ್ಯರುಗಳು ಉಪ ನಿಬಂಧನೆಗಳಲ್ಲಿ ನಿರ್ಧಿಷ್ಟಪಡಿಸಿದಂತೆ ಬ್ಯಾಂಕು ನೀಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿ ವರ್ಷ ಬಳಸಿಕೊಳ್ಳಲು ತಪ್ಪಿದಲ್ಲಿ, ಅಂತಹ ಸದಸ್ಯರುಗಳಿಗೆ ಸಾಮಾನ್ಯ ಸಭೆಯಲ್ಲಿ ಮತನೀಡುವ ಹಕ್ಕಿರುವುದಿಲ್ಲ. ಆದ್ದರಿಂದ ಸದಸ್ಯರು ಕಡ್ಡಾಯವಾಗಿ ಉಳಿತಾಯ ಖಾತೆ ತೆರೆಯತಕ್ಕದ್ದು.

9. ಸುಸ್ತಿದಾರರು ಬಾಕಿ ಇರುವ ಸಾಲವನ್ನು ಸಕಾಲದಲ್ಲಿ ಪಾವತಿಮಾಡಿ ಬ್ಯಾಂಕಿನ ಪ್ರಗತಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

10. ಸುಸ್ತಿದಾರರಾಗಿರುವ ಸದಸ್ಯರುಗಳು ತಮ್ಮ ಸಾಲದ ಕಂತು ಮತ್ತು ಬಡ್ಡಿಯನ್ನು ಸಾಮಾನ್ಯ ಸಭೆ ನಡೆಯುವ ಮುನ್ನ 15 ದಿನಗಳೊಳಗಾಗಿ ಪಾವತಿ ಮಾಡಲು ತಪ್ಪಿದಲ್ಲಿ, ಅವರಿಗೆ ಸಹಕಾರ ಸಂಘಗಳ ಕಾನೂನು 20(2) ಎ ಪ್ರಕಾರ ಸಭೆಯ ನಿರ್ಣಯದಲ್ಲಿ ಮತ ನೀಡಲು ಅವಕಾಶವಿರುವುದಿಲ್ಲ.

11. ಸದಸ್ಯರು ಬ್ಯಾಂಕಿನ ಲೆಕ್ಕಪತ್ರಗಳ ಬಗ್ಗೆ ಮಾತ್ರ ಚರ್ಚಿಸಬೇಕು ಬೇರೆ ಯಾವುದೇ ಅನಾವಶ್ಯಕ ಚರ್ಚೆಗೆ ಅವಕಾಶ ಇರುವುದಿಲ್ಲ.

12. ಸಭೆಗೆ ಹಾಜರಾಗುವ ಸದಸ್ಯರುಗಳಿಗೆ ಊಟದ ವ್ಯವಸ್ಥೆಯನ್ನು ಬೆಳೆಗ್ಗೆ 11.00 ಘಂಟೆಯಿಂದ ಏರ್ಪಡಿಸಲಾಗಿದೆ.

13. ನಿಯಮ 27A (ಎ)(ಬಿ)ರಂತೆ 5 ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕನಿಷ್ಠ 2 ಸಭೆಗೆ ಹಾಜಾರಾಗದಿದ್ದರೆ ಹಾಗೂ ಬ್ಯಾಂಕಿನ 5 ಸಹಕಾರಿ ವರ್ಷಗಳಲ್ಲಿ 2 ವರ್ಷದಲ್ಲಿ ಕನಿಷ್ಠ ವ್ಯವಹಾರ ಮಾಡದ ಸದಸ್ಯರಿಗೆ ಚುನಾವಣೆಯಲ್ಲಿ ಮತ ನೀಡುವ ಹಕ್ಕು ಇರುವುದಿಲ್ಲ.

14. ಸದಸ್ಯರು RBI ನಿಯಮಾವಳಿಯಂತೆ ತಮ್ಮ ಇತ್ತೀಚಿನ KYC ಧಾಖಲೆಗಳನ್ನು ನೀಡಿ update ಮಾಡುವುದು.

# ಆನಂದ ಕೋ-ಆಪರೇಟಿವ್ ಬ್ಯಾಂಕ್ ಲಿ.

ಬೆಂಗಳೂರು – 560 020

## "ಅಧ್ಯಕ್ಷರ ನುಡಿ"

ಆತ್ಮೀಯ ಸಹಕಾರಿ ಬಂಧುಗಳೇ,

ಬ್ಯಾಂಕಿನ 44ನೇ ಸರ್ವಸದಸ್ಯರ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನೂ ತುಂಬು ಹೃದಯದಿಂದ ಆತ್ಮೀಯವಾಗಿ ಸ್ವಾಗತಿಸುತ್ತೇನೆ. 2024–25ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಅವಗಾಹನೆಗೆ ಇಡಲು ಬಯಸುತ್ತೇನೆ.

ಕಳೆದ 46 ವರ್ಷಗಳಿಂದ ಸದಸ್ಯರಿಗೆ, ಗ್ರಾಹಕರಿಗೆ, ನಿಸ್ವಾರ್ಥ ಸೇವೆಯನ್ನು ನೀಡುವಲ್ಲಿ ಬ್ಯಾಂಕು ಸರ್ವ ದಿಶೆಯಲ್ಲಿ ಸಾಧನೆಯ ಮಟ್ಟವನ್ನು ಅತ್ಯುತ್ತಮಪಡಿಸಿಕೊಂಡು ಸಫಲವಾಗಿ ಮುನ್ನಡೆದಿದೆಯೆಂದು ಹೇಳಲು ತುಂಬಾ ಹೆಮ್ಮೆ ಎನಿಸುತ್ತದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ 8592 ಇದ್ದು ಷೇರು ಬಂಡವಾಳ ರೂ 2.96 ಕೋಟಿ ಇದೆ.

2024–25ನೇ ಸಾಲಿನ ಅಂತ್ಯಕ್ಕೆ ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು ಒಟ್ಟು ರೂ.9.21/– ಕೋಟಿ ಇದೆ. ಈ ದೊಡ್ಡ ಪ್ರಮಾಣದ ಕಾಯ್ದಿಟ್ಟ ನಿಧಿಯ ಸಂಗ್ರಹಣೆಯು ನಮ್ಮ ಬ್ಯಾಂಕಿನಲ್ಲಿ ಇದ್ದು ಯಾವುದೇ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಸಾಮರ್ಥ್ಯ ಹೊಂದಿದೆ.

ಬ್ಯಾಂಕಿನ ಠೇವಣಾತಿಯು ಪ್ರಸಕ್ತಸಾಲಿನ ಅಂತ್ಯಕ್ಕೆ ರೂ: 88.13 ಕೋಟಿ ಇರುತ್ತದೆ. ಗ್ರಾಹಕರ ಠೇವಣಿಗಳ ಭದ್ರತೆಗೆ ಡೆಪಾಸಿಟ್ ಇನ್ಸೂರೆನ್ಸ್ ಕಾರ್ಪೋರೇಷನ್ ಜೊತೆ ಠೇವಣಿ ವಿಮಾ ಯೋಜನೆಯನ್ನು ಹೊಂದಿದ್ದು ಠೇವಣಿದಾರರ ಠೇವಣಿಗೆ ಸಂಪೂರ್ಣ ರಕ್ಷಣೆ ಇದೆ. ಆದ್ದರಿಂದ ಸದಸ್ಯರು ಬ್ಯಾಂಕಿನ ವಿವಿಧ ಠೇವಣಿಗಳ ಯೋಜನೆಯಲ್ಲಿ ಹಣ ತೊಡಗಿಸಿ ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿಸುತ್ತೇನೆ.

ಸಹಕಾರಿ ತತ್ವದ ಮೂಲ ಉದ್ದೇಶವಾದ ಕಾಗೆ ಆಗುಳನೊಂದಕಂಡು ಕೂಗದೆ ತನ್ನ ಕುಲವನ್ನು, ಕೋಳಿ ಗುಟುಕನೊಂದಕಂಡು, ಕರೆಯದೆ ತನ್ನ ಬಳಗವನ್ನು ಎಂಬ ಬಸವಣ್ಣನವರ ಸಹಕಾರ ತತ್ವದ ಆಶಯದಂತೆ "ಪರಸ್ಪರ ಸಹಕಾರ ಪರಸ್ಪರ ಅಭಿವೃದ್ಧಿ"ಗೆ ಅನುಗುಣವಾಗಿ ಬ್ಯಾಂಕು ಎಲ್ಲಾ ವರ್ಗದ ಸದಸ್ಯರಿಗೆ, ವಿವಿಧ, ಉದ್ದೇಶಗಳಿಗೆ ಸಾಲವನ್ನು ನೀಡುತ್ತಾ ಬಂದಿರುವುದು. ಅರ್ಹ ಸದಸ್ಯರಿಗೆ ಬೆಂಗಳೂರಿನ ಎಲ್ಲಾ ಪ್ರದೇಶಗಳಲ್ಲಿ ಮನೆ ಕಟ್ಟಲು ಕಟ್ಟಿರುವ ಮನೆಗಳ ಮೇಲೆ ಸಾಲ ನೀಡುತ್ತಿದ್ದು ಸದಸ್ಯರ ಏಳಿಗೆಗೆ ಮತ್ತು ಅವರ ಕನಸುಗಳಿಗೆ ನಮ್ಮ ಬ್ಯಾಂಕು ಸ್ಪಂದಿಸಿ ಆರ್ಥಿಕ ನೆರವನ್ನು ನೀಡುತ್ತಾ ಬಂದಿರುತ್ತದೆ. ವಾಹನ ಸಾಲ, ಚಿನ್ನಾಭರಣಗಳ ಸಾಲ, ಜಾಮೀನು ಸಾಲ, ಅಡಮಾನಸಾಲ, ಚಾಲ್ತಿಖಾತೆ ಮೇಲೆ ಮೀರಳತೆ ಸಾಲ, ನೀಡಲಾಗುತ್ತಿದೆ. ಎಲ್ಲಾ ಅರ್ಹ ಸದಸ್ಯರಿಗೆ ಆರ್ಥಿಕ ನೆರವು ನೀಡುವಲ್ಲಿ ಪ್ರಮಾಣಿಕ ಪ್ರಯತ್ನ ಮಾಡಲಾಗಿದೆ.

ಸದಸ್ಯ ಭಾಂಧವರು ತಾವು ಪಡೆದ ಆರ್ಥಿಕ ನೆರವನ್ನು ನಿಗದಿತ ಉದ್ದೇಶಕ್ಕಾಗಿ ವಿನಿಯೋಗಿಸಿ ಕೊಳ್ಳಬೇಕೆಂದು ವಿನಂತಿಸುತ್ತೇನೆ. ಅದೇ ರೀತಿ ಮರುಪಾವತಿಯನ್ನು ಪ್ರಮಾಣಿಕವಾಗಿ ಮಾಡುತ್ತೀರೆಂದು ನಂಬಿದ್ದೇವೆ.

ಪ್ರಸಕ್ತ ಸಾಲಿನಲ್ಲಿ ಸಾಲ ಮತ್ತು ಮುಂಗಡಗಳ ಅಡಿಯಲ್ಲಿ ಮನೆಕಟ್ಟಲು ಮತ್ತು ಸ್ಥಿರಾಸ್ತಿ ಅಡಮಾನ ಸಾಲ ರೂ. 35.39 ಕೋಟಿ, ಚಿನ್ನಾಭರಣಗಳ ಮೇಲೆ ರೂ. 15.52 ಕೋಟಿ, ವಾಹನಗಳ ಮೇಲೆ ರೂ 0.33 ಕೋಟಿ, ಜಾಮೀನು ಸಾಲ ರೂ 4.43 ಕೋಟಿ ಇತರೆ ಸಾಲಗಳು ರೂ. 2.33 ಕೋಟಿ ಈ ರೀತಿ ಒಟ್ಟು ರೂ 58.00 ಕೋಟಿ ಹಣ ವಿತರಿಸಲಾಗಿದೆ.

ಸಾಲ ವಸೂಲಾತಿ ಪ್ರಗತಿಯನ್ನು ಬ್ಯಾಂಕಿನ ಆಡಳಿತ ಮಂಡಲಿಯ ಪ್ರತಿ ಸಭೆಯಲ್ಲಿ ಸೂಕ್ಷ್ಮವಾಗಿ ಅವಲೋಕಿಸಿ, ಕೂಲಂಕುಷವಾಗಿ ಚರ್ಚಿಸಿ ಕಾಲಕಾಲಕ್ಕೆ ಸಿಬ್ಬಂದಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುತ್ತಿರುವುದು. ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಮಂಡಲಿ ಸಭೆಯ ನಿರ್ಧಾರ ಮತ್ತು ನಿರ್ದೇಶನಗಳನ್ನು ಶ್ರದ್ಧೆಯಿಂದ ಜವಾಬ್ದಾರಿಯುತವಾಗಿ ಅನುಷ್ಠಾನಕ್ಕೆ ತಂದು ಪ್ರಸಕ್ತ ಸಾಲಿನ ನಿವ್ವಳ ಎನ್.ಪಿ.ಎ. ಪ್ರಮಾಣವನ್ನು ಶೇ 0% ರಷ್ಟು ಕನಿಷ್ಠ ಮಿತಿಯಲ್ಲಿ ಕಾಪಾಡಿಕೊಂಡು ಬರಲಾಗಿದೆ.

ಈ ದಿಶೆಯಲ್ಲಿ ಶ್ರಮ ವಹಿಸಿ ಕ್ರಮ ಜರುಗಿಸಲು ಸಹಕರಿಸಿದ ಆಡಳಿತ ಮಂಡಲಿ ಸದಸ್ಯರಿಗೆ ಹಾಗೂ ಸಿಬ್ಬಂದಿ ವರ್ಗಕ್ಕೂ ಕೃತಜ್ಞತೆ ಸಲ್ಲಿಸುತ್ತೇನೆ.

ಬ್ಯಾಂಕಿನ 2024–25 ಸಾಲಿನ ವಹಿವಾಟು ರೂ. 1,348.89 ಕೋಟಿ ದಾಟಿದೆ, 2024–25ನೇ ಸಾಲಿನ ಅಂತ್ಯಕ್ಕೆ ದುಡಿಯುವ ಬಂಡವಾಳ ರೂ. 104.29 ಕೋಟಿ ಇದ್ದು, ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ರೂ. 52.71 ಲಕ್ಷ ನಿವ್ವಳ ಲಾಭಗಳಿಸಿದ್ದು. ಬ್ಯಾಂಕ್‌ನ ಆಡಿಟ್ ವರ್ಗೀಕರಣ 'ಎ' ದರ್ಜೆಯಲ್ಲಿದೆ. ಪ್ರಸಕ್ತ ವಾರ್ಷಿಕ ವರ್ಷದಲ್ಲಿ ಡಿವಿಡೆಂಡ್ ನೀಡಲು ಹಾಗು ಸದಸ್ಯ ಭಾಂಧವರ ಮಕ್ಕಳಿಗೆ ಪ್ರತಿ ವರ್ಷದಂತೆ ವಿದ್ಯಾರ್ಥಿ ಪ್ರತಿಭಾ ಪುರಸ್ಕಾರ ನೀಡಲು ಹರ್ಷಿಸುತ್ತೇನೆ.

**ಬ್ಯಾಂಕಿನ ಗ್ರಾಹಕರ ಅನುಕೂಲಕ್ಕಾಗಿ ಈ ಕೆಳಕಂಡ ಸೌಲಭ್ಯ ಹಾಗೂ ಸೇವೆಗಳನ್ನು ಕಲ್ಪಿಸಲಾಗಿದೆ.**

1) ಬ್ಯಾಂಕಿನಲ್ಲಿ ಸೇಫ್ ಡಿಪಾಸಿಟ್ ಲಾಕರ್ ಸೌಲಭ್ಯವಿದೆ.
2) ಭದ್ರತೆ ದೃಷ್ಟಿಯಿಂದ ಎಲ್ಲಾ ಶಾಖೆಗಳಿಗೆ ಸಿ.ಸಿ.ಟಿ.ವಿ. ಅಳವಡಿಸಲಾಗಿದೆ.
3) ಸಿ.ಟಿ.ಎಸ್. ತೀರುವಳಿ ವ್ಯವಸ್ಥೆ ಮಾಡಲಾಗಿದೆ.
4) ಇ–ಸ್ಟಾಂಪಿಗ್ ವ್ಯವಸ್ಥೆ ಮಾಡಲಾಗಿದೆ.
5) ರೂ 3.0 ಲಕ್ಷದವರೆಗೆ ಜಾಮೀನು ಸಾಲದ ವ್ಯವಸ್ಥೆ.
6) ಎಲ್ಲಾ ಗ್ರಾಹಕರಿಗೆ ಬ್ಯಾಂಕಿನ ವಿವರ ಪಡೆಯಲು ಅನುಕೂಲವಾಗುವಂತೆ ಬ್ಯಾಂಕಿನ ವೆಬ್‌ಸೈಟ್ ಸೌಲಭ್ಯ ಒದಗಿಸಲಾಗಿದೆ. www.acobl.com
7) ಗ್ರಾಹಕರ ಅನುಕೂಲಕ್ಕಾಗಿ R.T.G.S/N.E.F.T ಸೌಲಭ್ಯ ಕಲ್ಪಿಸಲಾಗಿದೆ.

**ಮುಂದಿನ ದಿನಗಳಲ್ಲಿ ಈ ಕೆಳಗಿನ ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.**

1) ಬ್ಯಾಂಕನ್ನು ಭಾರತೀಯ ರಿಸರ್ವ್ ಬ್ಯಾಂಕಿನವರ 'ಎ' ಶ್ರೇಣಿಗೆ ತರುವುದು.
2) ದುಡಿಯುವ ಬಂಡವಾಳ ರೂ.104.29 ಕೋಟಿ ಇದ್ದು ಇದನ್ನು ಮುಂದಿನ ದಿನಗಳಲ್ಲಿ 120 ಕೋಟಿಗೆ ಹೆಚ್ಚಿಸುವುದು.
3) ರೂ 1.25 ಕೋಟಿಗಿಂತ ಹೆಚ್ಚಿನ ಲಾಭ ಗಳಿಸುವುದು.
4) ಮುಂದಿನ ವರ್ಷಗಳಲ್ಲಿ ಕೂಡ Net NPA ಪ್ರಮಾಣವನ್ನು 0%ಲ್ಲೆ ನಿರ್ವಹಣೆ ಮಾಡಲಾಗುವುದು.

5) ಠೇವಣಿಯನ್ನು 100 ಕೋಟಿ ರೂ. ಗಳಿಗೆ ಹೆಚ್ಚಿಸುವುದು.

6) ಸಾಲ ಮತ್ತು ಮುಂಗಡಗಳನ್ನು 70 ಕೋಟಿ ರೂಗಳಿಗೆ ಹೆಚ್ಚಿಸುವುದು.

7) ಹೆಚ್.ಬಿ.ಆರ್ ಬಡಾವಣೆಯಲ್ಲಿ ಇರುವ ಬ್ಯಾಂಕಿನ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಿದ್ದು AMC ಶಾಖೆಯನ್ನು ಸ್ಥಳಾಂತರಿಸಲಾಗಿದೆ.

8) ಬ್ಯಾಂಕಿನ ಗ್ರಾಹಕರ ಅನುಕೂಲಕ್ಕಾಗಿ ಎ.ಟಿ.ಎಂ ಸೌಲಭ್ಯದ ವ್ಯವಸ್ಥೆ ಮಾಡಲಾಗುವುದು.

"ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ಎಂಬ ಗಾಂಧೀಜಿಯವರ ತತ್ವದಂತೆ.

ಈ ಎಲ್ಲಾ ಯೋಜನೆಗಳನ್ನು ಸಕಾರಗೊಳಿಸಲು ಗೌರವಾನ್ವಿತ ಸದಸ್ಯರುಗಳು ಹಾಗೂ ಗ್ರಾಹಕರುಗಳು ವಿವಿಧ ಯೋಜನೆಯ ಠೇವಣಿಗಳಲ್ಲಿ ಹಣತೊಡಗಿಸಿ ಬ್ಯಾಂಕಿನ ಅಭಿವೃದ್ಧಿಗೆ ಕಾರಣಕರ್ತರಾಗಬೇಕಾಗಿ ಮತ್ತು ಸಲಹೆ ಸೂಚನೆಗಳನ್ನು ನೀಡಿ ಬ್ಯಾಂಕು ಅಭಿವೃದ್ಧಿ ಪಥದಲ್ಲಿ ಸಾಗಲು ಸಹಕರಿಸಬೇಕಾಗಿ ಕೋರುತ್ತೇನೆ. ಸದಸ್ಯರುಗಳಿಗೆ ಈಗಾಗಲೆ ತಿಳಿಸಿರುವ ಹಾಗೆ ಬ್ಯಾಂಕಿನ ಪರಿಷ್ಕೃತ ಬೈಲಾ ಪ್ರಕಾರ ಪ್ರತಿಯೊಬ್ಬ ಸದಸ್ಯರು ಹೊಂದಿರತಕ್ಕ ಕನಿಷ್ಠ ಷೇರು ರೂ 1,000–00ಗಳಾಗಿರುತ್ತದೆ ಮತ್ತು ಸದಸ್ಯರು ತಮ್ಮ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ಕನಿಷ್ಟ ವ್ಯವಹಾರಗಳನ್ನು ಮಾಡಬೇಕಾಗಿರುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ತಮ್ಮಲ್ಲಿ ಮತ್ತೊಮ್ಮೆ ವಿನಂತಿಸುತ್ತಾ ಕನಿಷ್ಠ ರೂ. 1,000–00 ಷೇರು ಇಲ್ಲದವರು ಶೀಘ್ರದಲ್ಲಿ ಬಾಕಿ ಇರುವ ಷೇರು ಹಣವನ್ನು ಪಾವತಿಸಲು ಮತ್ತು ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆ ಹೊಂದಿಲ್ಲದ ಸದಸ್ಯರುಗಳು ಖಾತೆಗಳನ್ನು ತೆರೆದು ವ್ಯವಹರಿಸಿ ಬ್ಯಾಂಕಿನ ಪ್ರಗತಿಗೆ ಸಹಕರಿಸುವಂತೆ ಕೋರುತ್ತೇನೆ.

ಕಾಲಕಾಲಕ್ಕೆ ಉತ್ತಮ ಸಲಹೆ, ಮಾರ್ಗದರ್ಶನ, ಸಹಕಾರವನ್ನು ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕ್, ಸಹಕಾರ ಇಲಾಖೆ, ಲೆಕ್ಕಪರಿಶೋಧನಾ ಇಲಾಖೆಯವರುಗಳಿಗೆ, ಹಣಕಾಸಿನ ವಹಿವಾಟಿಗೆ ಸಹಕರಿಸುತ್ತಿರುವ ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್ ಲಿ. ಆಕ್ಸಿಸ್ ಬ್ಯಾಂಕ್, ಇಂಡಸ್ ಇಂಡ್ ಬ್ಯಾಂಕ್, ಐ.ಡಿ.ಬಿ.ಐ. ಶ್ಯಾಮರಾವ್ ವಿಠ್ಠಲ್ ಕೋ–ಆಪರೇಟಿವ್ ಬ್ಯಾಂಕ್ ಲಿ, ರವರಿಗೆ ಮತ್ತು ಪ್ರಸಕ್ತ ಸಾಲಿನ ನಮ್ಮ ಬ್ಯಾಂಕಿನ ಲೆಕ್ಕಪರಿಶೋಧನೆ ಮಾಡಿ ವರದಿ ನೀಡಿರುವ ಮೇ॥ ವಿ.ಕೆ. ನಿರಂಜನ್ ಅಂಡ್ ಕಂ. ಸ್ಥಿರಾಸ್ತಿ ಸಾಲ ಮಂಜೂರಾತಿ ನೀಡಲು ಕಾನೂನು ಸಲಹೆ ನೀಡುತ್ತಿರುವ ಕಾನೂನು ಸಲಹೆಗಾರರಿಗೆ, ಸ್ಥಿರಾಸ್ತಿ ಮೌಲ್ಯಮಾಪಕರಿಗೆ, ಆಡಳಿತ ಮಂಡಲಿ ಸದಸ್ಯರುಗಳಿಗೆ ಹಾಗೂ ಬ್ಯಾಂಕಿನ ಸಲಹೆಗಾರರಿಗೆ, ಸಿಬ್ಬಂದಿ ವರ್ಗದವರಿಗೆ, ಗೌರವಾನ್ವಿತ ಸಹಕಾರ ಸದಸ್ಯ ಬಾಂದವರಿಗೆ, ಆತ್ಮೀಯ ಗ್ರಾಹಕರಿಗೆ, ಹಿತೈಷಿಗಳಿಗೆ ನನ್ನ ವೈಯಕ್ತಿಕವಾಗಿ ಹಾಗೂ ಆಡಳಿತ ಮಂಡಲಿಯ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ಇದೇ ರೀತಿಯ ತಮ್ಮೆಲ್ಲರ ಅಮೂಲ್ಯ ಸಹಕಾರ ಹಾಗೂ ಪ್ರೋತ್ಸಾಹವನ್ನು ಮುಂದೆಯೂ ನಿರೀಕ್ಷಿಸುತ್ತೇನೆ. ಮುಂದೆ ಬರುವ ಹಬ್ಬವಾದ ದಸರಾ ಮತ್ತು ದೀಪಾವಳಿ ಹಬ್ಬಕ್ಕೆ ಎಲ್ಲಾ ಸದಸ್ಯರುಗಳಿಗೂ ಬ್ಯಾಂಕಿನ ಪರವಾಗಿ ಶುಭಾಷಯಗಳನ್ನು ಕೋರುತ್ತೇನೆ. ಜೈಹಿಂದ್ ಜೈ ಕರ್ನಾಟಕ ಜೈ ಬೀಮ್.

ಆಡಳಿತ ಮಂಡಲಿಯ ಪರವಾಗಿ
**ಶ್ರೀ ದೊಡ್ಡೀರಯ್ಯ** ಸಿ.
ಅಧ್ಯಕ್ಷರು

# ಆನಂದ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ : ನಂ. 116, 1ನೇ ಮಹಡಿ, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020

## 43ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳು.

ದಿನಾಂಕ:22/09/2024 ರಂದು ಭಾನುವಾರ ಬೆಳಿಗ್ಗೆ 10.00 ಕ್ಕೆ ಶ್ರೀ. ಆದಿಚುಂಚನಗಿರಿ ಸಮುದಾಯ ಭವನ, ಹೊಸಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ, ವಿಜಯನಗರ, ಬೆಂಗಳೂರು – 560040, ಇಲ್ಲಿ ಬ್ಯಾಂಕಿನ ಗೌ॥ ಅಧ್ಯಕ್ಷರಾದ ಶ್ರೀ. ದೊಡ್ಡೀರಯ್ಯರವರ ಅಧ್ಯಕ್ಷತೆಯಲ್ಲಿ ನಡೆದ ಬ್ಯಾಂಕಿನ 2023–24ನೇ ಸಾಲಿನ 43ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳು. (1065 ಸದಸ್ಯರು ಸಭೆಗೆ ಹಾಜರಾಗಿರುತ್ತಾರೆ)

**1. ಪ್ರಾರ್ಥನೆ:**

ಕಾರ್ಯಕ್ರಮವು ಬುದ್ಧವಿಹಾರದಿಂದ ಬಂದ ಭೌದ್ದ ಬಿಕ್ಕುರವರಾದ ಶ್ರೀ.ರಾಜೇಂದ್ರ ಮತ್ತು ಶ್ರೀ.ಸಿದ್ದರಾಜ ರವರುಗಳಿಂದ ಪ್ರಾರ್ಥನೆಯೊಂದಿಗೆ ಮತ್ತು ಬ್ಯಾಂಕಿನ ಅಧ್ಯಕ್ಷರು ಹಾಗು ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಜ್ಯೋತಿ ಬೆಳಗುವ ಮೂಲಕ 43ನೇ ವಾರ್ಷಿಕ ಮಹಾ ಸಬೆಯು ಪ್ರಾರಂಭವಾಯಿತು.

**2. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಸಂತಾಪ ಸೂಚಿಸುವುದು:**

ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರು 2023–24ನೇ ಸಾಲಿನ ವಾರ್ಷಿಕ ವರದಿಯ ಪುಟ ಸಂಖ್ಯೆ 30 ಮತ್ತು 31ರಲ್ಲಿ ಕಾಣಿಸಿರುವ 15 ಸದಸ್ಯರುಗಳೊಂದಿಗೆ ಬ್ಯಾಂಕಿನ ಹಾಲಿ ನಿರ್ದೇಶಕರಾದ ಶ್ರೀ.ಗಂಗಾಧರಯ್ಯರವರ ನಿಧನದ ಸಂಗತಿಯನ್ನು ಸಭೆಗೆ ತಿಳಿಸಿ ದಿವಂಗತರ ಅಗಲಿಕೆಯಿಂದ ಆದ ದು:ಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ದೇವರು ನೀಡಲೆಂದು ಪ್ರಾರ್ಥಿಸಿ, ಅವರ ಆತ್ಮಕೆ ಶಾಂತಿಕೋರಿ ಎರಡು ನಿಮಿಷಗಳ ಕಾಲ ಮೌನ ಆಚರಿಸಿ ಸಂತಾಪ ಸೂಚಿಸಿದರು.

**3. ಅಧ್ಯಕ್ಷರಿಂದ ಸ್ವಾಗತ ಭಾಷಣ:**

## "ಅಧ್ಯಕ್ಷರ ನುಡಿ"

ಆತ್ಮೀಯ ಸಹಕಾರಿ ಬಂಧುಗಳೇ,

ಬ್ಯಾಂಕಿನ 43ನೇ ಸರ್ವಸದಸ್ಯರ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನೂ ತುಂಬು ಹೃದಯದಿಂದ ಆತ್ಮೀಯವಾಗಿ ಸ್ವಾಗತಿಸುತ್ತೇನೆ. 2023–24ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಅವಗಾಹನೆಗೆ ಇಡಲು ಬಯಸುತ್ತೇನೆ.

ಕಳೆದ 45 ವರ್ಷಗಳಿಂದ ಸದಸ್ಯರಿಗೆ, ಗ್ರಾಹಕರಿಗೆ, ನಿಸ್ವಾರ್ಥ ಸೇವೆಯನ್ನು ನೀಡುವಲ್ಲಿ ಬ್ಯಾಂಕು ಸರ್ವ ದಿಶೆಯಲ್ಲಿ ಸಾಧನೆಯ ಮಟ್ಟವನ್ನು ಅತ್ಯುತ್ತಮಪಡಿಸಿಕೊಂಡು ಸಫಲವಾಗಿ ಮುನ್ನಡೆದಿದೆಯೆಂದು ಹೇಳಲು ತುಂಬಾ ಹೆಮ್ಮೆ ಎನಿಸುತ್ತದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ 8453 ಇದ್ದು ಷೇರು ಬಂಡವಾಳ ರೂ 3.00 ಕೋಟಿ ಇದೆ.

2023–24ನೇ ಸಾಲಿನ ಅಂತ್ಯಕ್ಕೆ ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು ಒಟ್ಟು ರೂ.8.78/– ಕೋಟಿ ಇದೆ. ಈ ದೊಡ್ಡ ಪ್ರಮಾಣದ ಕಾಯ್ದಿಟ್ಟ ನಿಧಿಯ ಸಂಗ್ರಹಣೆಯು ನಮ್ಮ ಬ್ಯಾಂಕಿನಲ್ಲಿ ಇದ್ದು ಯಾವುದೇ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಸಾಮರ್ಥ್ಯ ಹೊಂದಿದೆ. ಬ್ಯಾಂಕಿನ ಠೇವಣಾತಿಯು ಪ್ರಸಕ್ತಸಾಲಿನ ಅಂತ್ಯಕ್ಕೆ ರೂ: 81.82 ಕೋಟಿ ಇರುತ್ತದೆ. ಗ್ರಾಹಕರ ಠೇವಣಿಗಳ ಭದ್ರತೆಗೆ ಡೆಪಾಸಿಟ್ ಇನ್ಸೂರೆನ್ಸ ಕಾರ್ಪೋರೇಷನ್ ಜೊತೆ ಠೇವಣಿ ವಿಮಾ ಯೋಜನೆಯನ್ನು ಹೊಂದಿದ್ದು ಠೇವಣಿದಾರರ ಠೇವಣಿಗೆ ಸಂಪೂರ್ಣ ರಕ್ಷಣೆ ಇದೆ. ಆದ್ದರಿಂದ ಸದಸ್ಯರು ಬ್ಯಾಂಕಿನ ವಿವಿಧ ಠೇವಣಿಗಳ ಯೋಜನೆಯಲ್ಲಿ ಹಣ ತೊಡಗಿಸಿ ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿಸುತ್ತೇನೆ.

ಸಹಕಾರಿ ತತ್ವದ ಮೂಲ ಉದ್ದೇಶವಾದ ಕಾಗೆ ಆಗುಳನೊಂದಕಂಡು ಕೂಗದೆ ತನ್ನ ಕುಲವನ್ನು, ಕೋಳಿ ಗುಟುಕನೊಂದಕಂಡು, ಕರೆಯದೆ ತನ್ನ ಬಳಗವನ್ನು ಎಂಬ ಬಸವಣ್ಣನವರ ಸಹಕಾರ ತತ್ವದ ಆಶಯದಂತೆ "ಪರಸ್ಪರ ಸಹಕಾರ ಪರಸ್ಪರ ಅಭಿವೃದ್ಧಿ"ಗೆ ಅನುಗುಣವಾಗಿ ಬ್ಯಾಂಕು ಎಲ್ಲಾ ವರ್ಗದ ಸದಸ್ಯರಿಗೆ, ವಿವಿಧ, ಉದ್ದೇಶಗಳಿಗೆ ಸಾಲವನ್ನು ನೀಡುತ್ತಾ ಬಂದಿರುವುದು. ಅರ್ಹ ಸದಸ್ಯರಿಗೆ ಬೆಂಗಳೂರಿನ ಎಲ್ಲಾ ಪ್ರದೇಶಗಳಲ್ಲಿ ಮನೆ ಕಟ್ಟಲು ಕಟ್ಟಿರುವ ಮನೆಗಳ ಮೇಲೆ ಸಾಲ ನೀಡುತ್ತಿದ್ದು ಸದಸ್ಯರ ಏಳಿಗೆಗೆ ಮತ್ತು ಅವರ ಕನಸುಗಳಿಗೆ ನಮ್ಮ ಬ್ಯಾಂಕು ಸ್ಪಂದಿಸಿ ಆರ್ಥಿಕ ನೆರವನ್ನು ನೀಡುತ್ತಾ ಬಂದಿರುತ್ತದೆ. ವಾಹನ ಸಾಲ, ಚಿನ್ನಾಭರಣಗಳ ಸಾಲ, ಜಾಮೀನು ಸಾಲ, ಅಡಮಾನಸಾಲ, ಚಾಲ್ತಿಖಾತೆ ಮೇಲೆ ಮೀರಳತೆ ಸಾಲ, ನೀಡಲಾಗುತ್ತಿದೆ. ಎಲ್ಲಾ ಅರ್ಹ ಸದಸ್ಯರಿಗೆ ಆರ್ಥಿಕ ನೆರವು ನೀಡುವಲ್ಲಿ ಪ್ರಮಾಣಿಕ ಪ್ರಯತ್ನ ಮಾಡಲಾಗಿದೆ.

ಸದಸ್ಯ ಭಾಂಧವರು ತಾವು ಪಡೆದ ಆರ್ಥಿಕ ನೆರವನ್ನು ನಿಗದಿತ ಉದ್ದೇಶಕ್ಕಾಗಿ ವಿನಿಯೋಗಿಸಿ ಕೊಳ್ಳಬೇಕೆಂದು ವಿನಂತಿಸುತ್ತೇನೆ. ಅದೇ ರೀತಿ ಮರುಪಾವತಿಯನ್ನು ಪ್ರಮಾಣಿಕವಾಗಿ ಮಾಡುತ್ತೀರೆಂದು ನಂಬಿದ್ದೇವೆ. ಸಾಲವನ್ನು ಕೊಂಡಾಗ, ಹಾಲುಗೊರ ಉಂಡಂತೆ ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ ಸರಿಯಾದ ಸಮಯಕ್ಕೆ ಮರುಪಾವತಿ ಎಂಬ ಸರ್ವಜ್ಞನ ವಚನದಂತೆ ಮಾಡಬೇಕು.

ಪ್ರಸಕ್ತ ಸಾಲಿನಲ್ಲಿ ಸಾಲ ಮತ್ತು ಮುಂಗಡಗಳ ಅಡಿಯಲ್ಲಿ ಮನೆಕಟ್ಟಲು ಮತ್ತು ಸ್ಥಿರಾಸ್ತಿ ಅಡಮಾನ ಸಾಲ ರೂ. 38.35 ಕೋಟಿ, ಚಿನ್ನಾಭರಣಗಳ ಮೇಲೆ ರೂ. 11.31 ಕೋಟಿ, ವಾಹನಗಳ ಮೇಲೆ ರೂ 0.53 ಕೋಟಿ, ಜಾಮೀನು ಸಾಲ ರೂ 4.11 ಕೋಟಿ ಇತರೆ ಸಾಲಗಳು ರೂ. 1.01 ಕೋಟಿ ಈ ರೀತಿ ಒಟ್ಟು ರೂ 55.31 ಕೋಟಿ ಹಣ ವಿತರಿಸಲಾಗಿದೆ.

ಸಾಲ ವಸೂಲಾತಿ ಪ್ರಗತಿಯನ್ನು ಬ್ಯಾಂಕಿನ ಆಡಳಿತ ಮಂಡಲಿಯ ಪ್ರತಿ ಸಭೆಯಲ್ಲಿ ಸೂಕ್ಷ್ಮವಾಗಿ ಅವಲೋಕಿಸಿ, ಕೂಲಂಕುಷವಾಗಿ ಚರ್ಚಿಸಿ ಕಾಲಕಾಲಕ್ಕೆ ಸಿಬ್ಬಂದಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುತ್ತಿರುವುದು. ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರು ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಮಂಡಲಿ ಸಭೆಯ ನಿರ್ಧಾರ ಮತ್ತು ನಿರ್ದೇಶನಗಳನ್ನು ಶ್ರದ್ಧೆಯಿಂದ ಜವಾಬ್ದಾರಿಯುತವಾಗಿ ಅನುಷ್ಠಾನಕ್ಕೆ ತಂದು ಪ್ರಸಕ್ತ ಸಾಲಿನ ನಿವ್ವಳ ಎನ್.ಪಿ.ಎ. ಪ್ರಮಾಣವನ್ನು ಶೇ 0% ರಷ್ಟು ಕನಿಷ್ಠ ಮಿತಿಯಲ್ಲಿ ಕಾಪಾಡಿಕೊಂಡು ಬರಲಾಗಿದೆ. ಈ ದಿಶೆಯಲ್ಲಿ ಶ್ರಮ ವಹಿಸಿ ಕ್ರಮ ಜರುಗಿಸಲು ಸಹಕರಿಸಿದ ಆಡಳಿತ ಮಂಡಲಿ ಸದಸ್ಯರಿಗೆ ಹಾಗೂ ಸಿಬ್ಬಂದಿ ವರ್ಗಕ್ಕೂ ಕೃತಜ್ಞತೆ ಸಲ್ಲಿಸುತ್ತೇನೆ.

ಬ್ಯಾಂಕಿನ 2023–24 ಸಾಲಿನ ವಹಿವಾಟು ರೂ.1,294.39 ಕೋಟಿ ದಾಟಿದೆ, 2023–24ನೇ ಸಾಲಿನ ಅಂತ್ಯಕ್ಕೆ ದುಡಿಯುವ ಬಂಡವಾಳ ರೂ. 97.83 ಕೋಟಿ ಇದ್ದು, ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ರೂ. 75.03 ಲಕ್ಷ ನಿವ್ವಳ ಲಾಭಗಳಿಸಿದ್ದು. ಬ್ಯಾಂಕ್‌ನ ಆಡಿಟ್ ವರ್ಗೀಕರಣ 'ಎ' ದರ್ಜೆಯಲ್ಲಿದೆ. ಪ್ರಸಕ್ತ ವಾರ್ಷಿಕ ವರ್ಷದಲ್ಲಿ ಡಿವಿಡೆಂಡ್ ನೀಡಲು ಹಾಗು ಸದಸ್ಯ ಭಾಂಧವರ ಮಕ್ಕಳಿಗೆ ಪ್ರತಿ ವರ್ಷದಂತೆ ವಿದ್ಯಾರ್ಥಿ ಪ್ರತಿಭಾ ಪುರಸ್ಕಾರ ನೀಡಲು ಹರ್ಷಿಸುತ್ತೇನೆ.

"ಬೆಳಕಿನ ಹಾದಿಯಲ್ಲಿ ನಡೆಯಲು ಪ್ರಯತ್ನಿಸಬಹುದು ಆದರೆ ಕನಸುಗಳಿಲ್ಲದ ಹಾದಿಯಲ್ಲಿ ನಡೆಯಲಾಗುವುದಿಲ್ಲ" ಅಂದರೆ ಪ್ರಗತಿಗೆ ಅಭಿವೃದ್ದಿಗೆ ಪೂರ್ವಕವಾದ ದೂರದೃಷ್ಟಿಯ ಯೋಜನೆಗಳು ಇರಬೇಕು ಎಂಬ ಆಶಯದಂತೆ.

**ಬ್ಯಾಂಕಿನ ಗ್ರಾಹಕರ ಅನುಕೂಲಕ್ಕಾಗಿ ಈ ಕೆಳಕಂಡ ಸೌಲಭ್ಯ ಹಾಗೂ ಸೇವೆಗಳನ್ನು ಕಲ್ಪಿಸಲಾಗಿದೆ..**

1) ಬ್ಯಾಂಕಿನಲ್ಲಿ ಸೇಫ್ ಡಿಪಾಸಿಟ್ ಲಾಕರ್ ಸೌಲಭ್ಯವಿದೆ.

2) ಭದ್ರತೆ ದೃಷ್ಠಿಯಿಂದ ಎಲ್ಲಾ ಶಾಖೆಗಳಿಗೆ ಸಿ.ಸಿ.ಟಿ.ವಿ. ಅಳವಡಿಸಲಾಗಿದೆ.

3) ಸಿ.ಟಿ.ಎಸ್. ತೀರುವಳಿ ವ್ಯವಸ್ಥೆ ಮಾಡಲಾಗಿದೆ.

4) ಇ–ಸ್ಟಾಂಪಿಗ್ ವ್ಯವಸ್ಥೆ ಮಾಡಲಾಗಿದೆ.

5) ರೂ 3.0 ಲಕ್ಷದವರೆಗೆ ಜಾಮೀನು ಸಾಲದ ವ್ಯವಸ್ಥೆ.

6) ಎಲ್ಲಾ ಗ್ರಾಹಕರಿಗೆ ಬ್ಯಾಂಕಿನ ವಿವರ ಪಡೆಯಲು ಅನುಕೂಲವಾಗುವಂತೆ ಬ್ಯಾಂಕಿನ ವೆಬ್‌ಸೈಟ್ ಸೌಲಭ್ಯ ಒದಗಿಸಲಾಗಿದೆ. www.acobl.com

7) ಗ್ರಾಹಕರ ಅನುಕೂಲಕ್ಕಾಗಿ R.T.G.S / N.E.F.T ಸೌಲಭ್ಯ ಕಲ್ಪಿಸಲಾಗಿದೆ.

**ಮುಂದಿನ ದಿನಗಳಲ್ಲಿ ಈ ಕೆಳಗಿನ ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.**

1) ಬ್ಯಾಂಕನ್ನು ಭಾರತೀಯ ರಿಸರ್ವ್ ಬ್ಯಾಂಕಿನವರ 'ಎ' ಶ್ರೇಣಿಗೆ ತರುವುದು.

2) ದುಡಿಯುವ ಬಂಡವಾಳ ರೂ.97.83 ಕೋಟಿ ಇದ್ದು ಇದನ್ನು ಮುಂದಿನ ದಿನಗಳಲ್ಲಿ 120 ಕೋಟಿಗೆ ಹೆಚ್ಚಿಸುವುದು.

3) ರೂ 1.25 ಕೋಟಿಗಿಂತ ಹೆಚ್ಚಿನ ಲಾಭ ಗಳಿಸುವುದು.

4) ಮುಂದಿನ ವರ್ಷಗಳಲ್ಲಿ ಕೂಡ Net NPA ಪ್ರಮಾಣವನ್ನು 0%ಲ್ಲೆ ನಿರ್ವಹಣೆ ಮಾಡಲಾಗುವುದು.

5) ಠೇವಣಿಯನ್ನು 100 ಕೋಟಿ ರೂ. ಗಳಿಗೆ ಹೆಚ್ಚಿಸುವುದು.

6) ಸಾಲ ಮತ್ತು ಮುಂಗಡಗಳನ್ನು 70 ಕೋಟಿ ರೂಗಳಿಗೆ ಹೆಚ್ಚಿಸುವುದು.

7) ಹೆಚ್.ಬಿ.ಆರ್ ಬಡಾವಣೆಯಲ್ಲಿ ಇರುವ ಬ್ಯಾಂಕಿನ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಿದ್ದು ಶೀಘ್ರದಲ್ಲಿಯೇ ಗ್ರಾಹಕರಿಗೆ ಅನುಕೂಲವಾಗುವಂತೆ ಆರ್.ಬಿ.ಐ. ನಿಯಮಾವಳಿಯಂತೆ ಹೊಸ ಶಾಖೆ ತೆರೆಯಲಾಗುವುದು ಅಥವಾ AMC ಶಾಖೆಯನ್ನು ಸ್ಥಳಾಂತರಿಸಲು ಕ್ರಮವಿಡಲಾಗುವುದು.

8) ಬ್ಯಾಂಕಿನ ಗ್ರಾಹಕರ ಅನುಕೂಲಕ್ಕಾಗಿ ಎ.ಟಿ.ಎಂ ಸೌಲಭ್ಯದ ವ್ಯವಸ್ಥೆ ಮಾಡಲಾಗುವುದು.

**"ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ಎಂಬ ಗಾಂಧೀಜಿಯವರ ತತ್ವದಂತೆ.**

ಈ ಎಲ್ಲಾ ಯೋಜನೆಗಳನ್ನು ಸಕಾರಗೊಳಿಸಲು ಗೌರವಾನ್ವಿತ ಸದಸ್ಯರುಗಳು ಹಾಗೂ ಗ್ರಾಹಕರುಗಳು ವಿವಿಧ ಯೋಜನೆಯ ಠೇವಣಿಗಳಲ್ಲಿ ಹಣತೊಡಗಿಸಿ ಬ್ಯಾಂಕಿನ ಅಭಿವೃದ್ಧಿಗೆ ಕಾರಣಕರ್ತರಾಗಬೇಕಾಗಿ ಮತ್ತು ಸಲಹೆ ಸೂಚನೆಗಳನ್ನು ನೀಡಿ ಬ್ಯಾಂಕು ಅಭಿವೃದ್ಧಿ ಪಥದಲ್ಲಿ ಸಾಗಲು ಸಹಕರಿಸಬೇಕಾಗಿ ಕೋರುತ್ತೇನೆ. ಸದಸ್ಯರುಗಳಿಗೆ ಈಗಾಗಲೆ ತಿಳಿಸಿರುವ ಹಾಗೆ ಬ್ಯಾಂಕಿನ ಪರಿಷ್ಕೃತ ಬೈಲಾ ಪ್ರಕಾರ ಪ್ರತಿಯೊಬ್ಬ ಸದಸ್ಯರು ಹೊಂದಿರತಕ್ಕ ಕನಿಷ್ಠ ಷೇರು ರೂ 1,000–00ಗಳಾಗಿರುತ್ತದೆ ಮತ್ತು ಸದಸ್ಯರು ತಮ್ಮ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ಕನಿಷ್ಟ ವ್ಯವಹಾರಗಳನ್ನು ಮಾಡಬೇಕಾಗಿರುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ತಮ್ಮಲ್ಲಿ ಮತ್ತೊಮ್ಮೆ ವಿನಂತಿಸುತ್ತಾ ಕನಿಷ್ಠ ರೂ. 1,000–00 ಷೇರು ಇಲ್ಲದವರು ಶೀಘ್ರದಲ್ಲಿ ಬಾಕಿ ಇರುವ ಷೇರು ಹಣವನ್ನು ಪಾವತಿಸಲು ಮತ್ತು ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆ ಹೊಂದಿಲ್ಲದ ಸದಸ್ಯರುಗಳು ಖಾತೆಗಳನ್ನು ತೆರೆದು ವ್ಯವಹರಿಸಿ ಬ್ಯಾಂಕಿನ ಪ್ರಗತಿಗೆ ಸಹಕರಿಸುವಂತೆ ಕೋರುತ್ತೇನೆ.

ಕಾಲಕಾಲಕ್ಕೆ ಉತ್ತಮ ಸಲಹೆ, ಮಾರ್ಗದರ್ಶನ, ಸಹಕಾರವನ್ನು ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕ್, ಸಹಕಾರ ಇಲಾಖೆ, ಲೆಕ್ಕಪರಿಶೋಧನಾ ಇಲಾಖೆಯವರುಗಳಿಗೆ, ಹಣಕಾಸಿನ ವಹಿವಾಟಿಗೆ ಸಹಕರಿಸುತ್ತಿರುವ ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್ ಲಿ. ಆಕ್ಸಿಸ್ ಬ್ಯಾಂಕ್, ಇಂಡಸ್ ಇಂಡ್ ಬ್ಯಾಂಕ್, ಐ.ಡಿ.ಬಿ.ಐ. ಶ್ಯಾಮರಾವ್ ವಿಠ್ಠಲ್ ಕೊ–ಆಪರೇಟಿವ್ ಬ್ಯಾಂಕ್ ಲಿ, ರವರಿಗೆ ಮತ್ತು ಪ್ರಸಕ್ತ ಸಾಲಿನ ನಮ್ಮ ಬ್ಯಾಂಕಿನ ಲೆಕ್ಕಪರಿಶೋಧನೆ ಮಾಡಿ ವರದಿ ನೀಡಿರುವ ಮೇ॥ ಎಂ.ಎನ್.ಎಸ್. ಮತ್ತು ಕಂ. ಸ್ಥಿರಾಸ್ತಿ ಸಾಲ ಮಂಜೂರಾತಿ ನೀಡಲು ಕಾನೂನು ಸಲಹೆ ನೀಡುತ್ತಿರುವ ಕಾನೂನು ಸಲಹೆಗಾರರಿಗೆ, ಸ್ಥಿರಾಸ್ತಿ ಮೌಲ್ಯಮಾಪಕರಿಗೆ, ಆಡಳಿತ ಮಂಡಲಿ ಸದಸ್ಯರುಗಳಿಗೆ ಹಾಗೂ ಬ್ಯಾಂಕಿನ ಸಲಹೆಗಾರರಿಗೆ, ಸಿಬ್ಬಂದಿ ವರ್ಗದವರಿಗೆ, ಗೌರವಾನ್ವಿತ ಸಹಕಾರ ಸದಸ್ಯ ಬಾಂದವರಿಗೆ, ಆತ್ಮೀಯ ಗ್ರಾಹಕರಿಗೆ, ಹಿತೈಷಿಗಳಿಗೆ ನನ್ನ ವೈಯಕ್ತಿಕವಾಗಿ ಹಾಗೂ ಆಡಳಿತ ಮಂಡಲಿಯ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ಇದೇ ರೀತಿಯ ತಮ್ಮೆಲ್ಲರ ಅಮೂಲ್ಯ ಸಹಕಾರ ಹಾಗೂ ಪ್ರೋತ್ಸಾಹವನ್ನು ಮುಂದೆಯೂ ನಿರೀಕ್ಷಿಸುತ್ತೇನೆ. ಮುಂದೆ ಬರುವ ಹಬ್ಬವಾದ ದಸರಾ ಮತ್ತು ದೀಪಾವಳಿ ಹಬ್ಬಕ್ಕೆ ಎಲ್ಲಾ ಸಹಸ್ಯರುಗಳಿಗೂ ಬ್ಯಾಂಕಿನ ಪರವಾಗಿ ಶುಭಾಶಯಗಳನ್ನು ಕೋರುತ್ತೇನೆ. ಜೈಹಿಂದ್ ಜೈ ಕರ್ನಾಟಕ ಜೈ ಬೀಮ್.

**4. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಬಗ್ಗೆ**

ಪ್ರತಿ ವರ್ಷದಂತೆ ಈ ಸಾಲಿನಲ್ಲೂ ಸಹ ಎಸ್.ಎಸ್.ಎಲ್.ಸಿ. ಯಲ್ಲಿ 9 ವಿದ್ಯಾರ್ಥಿಗಳಿಗೆ, ಪಿ,ಯು.ಸಿ 17 ವಿದ್ಯಾರ್ಥಿಗಳಿಗೆ, ಪದವಿ 5 ವಿದ್ಯಾರ್ಥಿಗಳಿಗೆ, ಡಿಪ್ಲೊಮ–1, ಇಂಜಿನಿಯರಿಂಗ್

ಪದವಿ 4 ವಿದ್ಯಾರ್ಥಿಗಳಿಗೆ ಮತ್ತು ಸ್ನಾತಕೋತ್ತರ ಪದವಿ ಪಡೆದ 4 ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಹಣ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿ ಪುರಸ್ಕರಿಸಲಾಯಿತು.

**Prathibha Puraskara Award for SSLC Students for the Year 2023-2024**

**State & ICSE Above 90%**

| Sl. No | Students Name | Member's Name | Mem. No | Percent |
|---|---|---|---|---|
| 1 | Dheeraj Kumar | Kumaraswamy H K | 9452 | 96% |
| 2 | Varshitha K S | Shivalingaraju K L | 10972 | 92.48% |
| 3 | Rithvik S | R Sreenivas | 9969 | 92.32% |
| 4 | Deekshith Kumar | Kumaraswamy H K | 9452 | 90% |
| 5 | Yashas K | Kumar B P | 10298 | 87.5% |
| **S S L C (CBSE) ABOVE-70%** | | | | |
| 6 | Rakshit Rajanna | Rajanna I.k. | 10213 | 98% |
| 7 | Sanmaya R S | H C Priyadarshini | 10211 | 91.2% |
| 8 | Preetham K M | Nandish K M | 7764 | 82.57 |
| 9 | Nayanika T | Thirthalingaiah | 7423 | 75.2% |

**Prathibha Puraskara Award for PUC Students for the Year 2023-2024**

**Above 80%**

| Sl. No | Students Name | Member's Name | Mem. No | Percent |
|---|---|---|---|---|
| 1 | Manushree I R | Rajanna I K | 10213 | 95% |
| 2 | Ashutosh Adithya | Manjunatha M R | 95 | 94.33% |
| 3 | Nidhi Mahesh | Mahesh M | 8193 | 93.66% |
| 4 | Bhargav K M | Leelavathi B V | 5805 | 93.33% |
| 4 | Prerana N R | Ravindra J | 9338 | 91.83% |
| 5 | Vandanaraj S | Suresh R | 8274 | 91.50% |
| 6 | Srushti S | Shashikantha | 9641 | 90.33% |
| 7 | Tuvithanand | Ananda | 9403 | 89.33% |

| | | | | |
|---|---|---|---|---|
| 8 | Harshitha H | Hanumaiah E | 10960 | 89% |
| 9 | Keerthana Y R | Rudraiah | 7752 | 88% |
| 10 | Trisha Sheshanna | Yashoda C | 9400 | 84.50% |
| 11 | Pavan D C | Sumarani M S | 10355 | 83.80% |
| 12 | Sonika M S | Siddappa M K | 8644 | 82.50% |
| 13 | Prapul G | Govinda Raju S | 10897 | 82.50% |
| 14 | Vishwas M S | Sumithra | 11044 | 82.16% |
| 15 | Mohitha M D | Doddalingaiah | 9620 | 82% |
| 16 | Keerthi S | Gowramma D T | 10637 | 80.83% |
| 17 | Tanujashree S K | Sampathkumar K S L | 4345 | 80.50% |

**Prathibha Puraskara Award for Degree Students for the Year 2023-24**

**Above 75%**

| Sl. No | Students Name | Member's Name | Mem. No | Percent |
|---|---|---|---|---|
| 1 | Vaishnavi M. D. | Doddalingiaah | 9620 | 92% |
| 2 | Reshma | Anantha Lakshmi T | 2498 | 84.02% |
| 3 | Gowthami Sana M S | Sampath Kumar | 9553 | 87% |
| 4 | Ankitha N. | N Nagarajaiah | 9919 | 80 % |
| 5 | Nithya Shree S. | Shantharaju M | | 9.54% |
| 6 | Tejas R. | Rangaswamy | | 82.10% |

**Prathibha Puraskara Award for Diploma Students for the Year 2023-24**

**Above 75%**

| Sl. No | Students Name | Member's Name | Mem. No | Percent |
|---|---|---|---|---|
| 1 | Chirag H | Hari Prasad | 11060 | 89% |

**Prathibha Puraskara Award for Engineering Students for the Year 2023-24**
**Above 75%**

| Sl. No | Students Name | Member's Name | Mem. No | Percent |
|---|---|---|---|---|
| 1 | Keerthana N | Nagesh P M | 7534 | CGPA – 9.16 |
| 2 | Sinchana H K | Krishnamurthy R | 10146 | CGPA – 9.05 |
| 3 | Likhith N | Narayana D | 7141 | 8.30% |
| 4 | Bhavana N R | Ravindra J | 9338 | CGPA -8 |

**Prathibha Puraskara Award for Master Degree Students for the Year 2023-24**
**Above 70%**

| Sl. No | Students Name | Member's Name | Mem. No | Percent |
|---|---|---|---|---|
| 1 | Likith Kumar B K | B Basavalingaiah | 9339 | 89.30% |
| 2 | Supriya K | Krishnaiah C | 5822 | 82.5% |
| 3 | Anupriya | Chandrashekar C M | 4037 | 78.30% |
| 4 | Varun H R | Hanumaraju G C | 10886 | 72% |

**Prathibha Puraskara Award for Ph.D Degree Students for the Year 2023-24**

| Sl. No | Students Name | Member's Name | Mem. No | Percent |
|---|---|---|---|---|
| 1 | Sunil Kumar A | | | |

5. **2023–24ನೇ ಸಾಲಿನ 43ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.**

ಬ್ಯಾಂಕಿನ ಶ್ರೀ. ಸಿ. ಸಿದ್ದರಾಜು ನಿರ್ದೇಶಕರು ಬ್ಯಾಂಕಿನ 2023–24ನೇ ಸಾಲಿನ 43ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಸಭೆಗೆ ಓದಿ ಹೇಳಿದರು. ಸಭೆಯು ಕರತಾಡನದ ಮೂಲಕ ಸರ್ವಾನುಮತದಿಂದ ಅಂಗೀಕರಿಸಿತು.

6. **ದಿನಾಂಕ:24/09/2023 ರಂದು ನಡೆದ 2022–2023ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಗಳನ್ನು ಓದಿ ದೃಢೀಕರಿಸುವುದು.**

ದಿನಾಂಕ:24/09/2023 ರಂದು ನಡೆದ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನಡವಳಿಗಳನ್ನು ಬ್ಯಾಂಕಿನ ನಿರ್ದೇಶಕರಾದ ಶ್ರೀ. ಎಂ. ಸಿ. ನಂದಕುಮಾರ್ ನಿರ್ದೇಶಕರು ಸಭೆಯಲ್ಲಿ ಓದಿ

ಹೇಳಿದರು. ನಂತರ ಸಭೆಯಲ್ಲಿ ದಿನಾಂಕ:24/09/2023 ರಂದು ನಡೆದ 2022–23 ನೇ ಸಾಲಿನ ವಾರ್ಷಿಕ ಮಹಾಸಭೆಯ ಎಲ್ಲಾ ದಾಖಲಾಗಿರುವ ನಡವಳಿಗಳನ್ನು ಮತ್ತು ವಿವರಣೆಯನ್ನು ಸಭೆಯು ಒಪ್ಪಿ ಸರ್ವಾನುಮತದಿಂದ ಅಂಗೀಕರಿಸಿತು.

**7. 2023–2024 ನೇ ಸಾಲಿನ ಆಡಳಿತ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.**

2023–2024 ನೇ ಸಾಲಿನ ವಾರ್ಷಿಕ ವರದಿಯನ್ನು ಬ್ಯಾಂಕಿನ ಲೆಕ್ಕಿಕರಾದ ಶ್ರೀ. ಎನ್. ಎಂ. ಮಾದೇಶ್ ರವರು ಸಭೆಯಲ್ಲಿ ಓದಿ ವಿವರಿಸಿದರು. ಬ್ಯಾಂಕಿನಲ್ಲಿ 2023–2024ನೇ ಸಾಲಿನಲ್ಲಿ ಇದ್ದ ಸದಸ್ಯತ್ವ ಮತ್ತು ಷೇರು ಬಂಡವಾಳದ ಬಗ್ಗೆ ಆಪದ್ಧನ ಮತ್ತು ಇತರೆ ನಿಧಿಗಳು ಠೇವಣಿಗಳು, ಸಾಲ ಮತ್ತು ಮುಂಗಡಗಳು, ವಸೂಲಾತಿ, ಕರಡು ಮತ್ತು ಸಂಶಯಾಸ್ಪದ ಸಾಲದ ನಿಧಿ ಬಗ್ಗೆ ಮತ್ತು ವರದಿ ಸಾಲಿನಲ್ಲಿ ನಡೆದ ಸಭೆಗಳು, ಬ್ಯಾಂಕಿನ ಶಾಖೆಗಳ ಸ್ಥಿರಾಸ್ತಿಗಳ ಬಗ್ಗೆ ವಿವರಣೆ ನೀಡಿದರು. ಸಭೆಯು ಕರತಾಡನದ ಮೂಲಕ 2023–2024 ನೇ ಸಾಲಿನ ಆಡಳಿತ ವರದಿಯನ್ನು ಒಪ್ಪಿ ಸರ್ವಾನುಮತದಿಂದ ಅಂಗೀಕರಿಸಿತು.

**8. 2023–24ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಅಂಗೀಕರಿಸುವುದು ಹಾಗೂ ಲೆಕ್ಕಪರಿಶೋಧಕರ ವರದಿಗೆ ಆಡಳಿತ ಮಂಡಳಿಯವರು ಕೊಟ್ಟಿರುವ ಸಮಜಾಯಿಷಿಗಳನ್ನು ಅಂಗೀಕರಿಸುವುದು.**

2023–24ನೇ ಸಾಲಿಗೆ ಲೆಕ್ಕಪತ್ರಗಳನ್ನು ಪರಿಶೋಧಿಸಿದ ಮೇ॥ ಎಂ.ಎನ್ ಎಸ್ ಅಂಡ್ ಕೋ ರವರು ನೀಡಿರುವ ಲೆಕ್ಕಪತ್ರಗಳ ವರದಿಯನ್ನು ಬ್ಯಾಂಕಿನ ಶ್ರೀ. ರಾಚಯ್ಯ ಸಿ., ನಿರ್ದೇಶಕರು ಓದಿ ವರದಿಯಲ್ಲಿ ತಿಳಿಸಿರುವ ನ್ಯೂನತೆಗಳಿಗೆ ಬ್ಯಾಂಕಿನ ವತಿಯಿಂದ ನೀಡಿರುವ ಸಮಜಾಯಿಷಿಗಳನ್ನು ಸಹ ಸಭೆಗೆ ಓದಿ ತಿಳಿಸಿದರು. ಚರ್ಚೆ ನಂತರ 2023–24ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮತ್ತು ಲೆಕ್ಕಪರಿಶೋಧಕರ ವರದಿಗೆ ನೀಡಿರುವ ಸಮಜಾಯಿಷಿಗಳನ್ನು ಅಂಗೀಕರಿಸಿರುವುದಾಗಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**9. 2023–24ನೇ ಸಾಲಿನ ಲಾಭದ ವಿಂಗಡಣೆ ಹಾಗೂ ವಿತರಣೆಯನ್ನು ಅಂಗೀಕರಿಸುವುದು.**

ಉಪನಿಯಮದ 96 ಹಾಗೂ ಸಹಕಾರ ಸಂಘಗಳ ಕಾಯ್ದೆ ಕಲಂ 57ರನ್ವಯ ಈ ಕೆಳಕಂಡಂತೆ ಲಾಭ ವಿಂಗಡಣೆ ಮಾಡಿರುವುದನ್ನು ಬ್ಯಾಂಕಿನ ನಿರ್ದೇಶಕರಾದ ಶ್ರೀ. ಧನಂಜಯ ಕೆ.ಹೆಚ್. ರವರು ಸಭೆಗೆ ಓದಿ ಹೇಳುತ್ತಾ ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ರೂ.103.89 ಲಕ್ಷಗಳ ಲಾಭಗಳಿಸಿದ್ದು ಈ ಲಾಭದಲ್ಲಿ ಲೆಕ್ಕಪರಿಶೋಧನಾ ಶುಲ್ಕ ರೂ. 1.86 ಲಕ್ಷ, ಆದಾಯ ತೆರಿಗೆ ರೂ.27.00 ಲಕ್ಷಗಳನ್ನು ಕಾಯ್ದಿರಿಸಿದ ನಂತರ ನಿವ್ವಳ ಲಾಭ ರೂ.83.33ಲಕ್ಷಗಳ ಲಾಭ ಬಂದಿರುತ್ತದೆ ಎಂದು ತಿಳಿಸಿದರು.

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಈ ವರ್ಷ ಡಿವಿಡೆಂಡ್ 9% ನೀಡಲಾಗುವುದು.

ಪ್ರಸಕ್ತ ಲಾಭ ರೂ.75,03,047.56 ಗಳನ್ನು ಬ್ಯಾಂಕಿನ ಉಪನಿಯಮ 103 ಹಾಗೂ ಸಹಕಾರ ಸಂಘಗಳ ಕಾಯ್ದೆ ಕಲಂ 57ರನ್ವಯ ಈ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿದೆ ಮತ್ತು ಈ ಕೆಳಕಂಡಂತೆ ಲಾಭ ವಿಂಗಡಣೆ ಮಾಡಲಾಗುವುದೆಂದು ಸಭೆಗೆ ತಿಳಿಸಿದರು.

## ಲಾಭ ವಿಂಗಡಣೆ

| ಕ್ರ. ಸಂ. | ವಿವರ | ಮೊಬಲಗು |
|---|---|---|
| 1 | ರಿಸರ್ವ್ ಫಂಡ್ (25%) | 18,75,762–00 |
| 2 | ಸಹಕಾರಿ ವಿದ್ಯಾನಿಧಿ(2%) | 1,12,546–00 |
| 3 | ಡಿವಿಡೆಂಡ್(9%) | 26,96,009–00 |
| 4 | ಕರಡು ಸಾಲದ ನಿಧಿ(10%) | 2,76,246–00 |
| 5 | ಕಟ್ಟಡ ನಿಧಿ (15%) | 4,14,369–00 |
| 6 | ದಾನ ನಿಧಿ (10%) | 2,76,246–00 |
| 7 | ಪ್ರಚಾರ ನಿಧಿ (10%) | 2,76,246–00 |
| 8 | ಪಟ್ಟಣ ಸಹಕಾರಿ ಬ್ಯಾಂಕ್ ಅಭಿವೃದ್ಧಿ ನಿಧಿ (1%) | 56,273–00 |
| 9 | ಮರಣೋತ್ತರ ನಿಧಿ (10%) | 2,76,246–00 |
| 10 | ಲಾಭಾಂಶ ಸಮ ನಿಧಿ (10%) | 2,76,246–00 |
| 11 | ಜುಬಿಲಿ ಫಂಡ್ (10%) | 2,76,246–00 |
| 12 | ನಿರ್ದೇಶಕರ ಪರಿಹಾರ ನಿಧಿ (10%) | 2,76,246–00 |
| 13 | ಸಿಬ್ಬಂದಿ ಪರಿಹಾರ ನಿಧಿ (10%) | 2,76,246–00 |
| 14 | ಉಳಿಕೆ ಲಾಭ(ರಿಸರ್ವ್ ಫಂಡಿಗೆ) | 1,38,120–56 |
|  | **ಒಟ್ಟು ರೂ.** | **75,03,047.56** |

ಸಭೆಯು ಒಪ್ಪಿ ಕರತಾಡನದ ಮೂಲಕ ಮೇಲೆ ವಿವರಿಸಲಾದ ಲಾಭ ವಿಂಗಡಣೆಯನ್ನು ಸರ್ವಾನುಮತದಿಂದ ಅಂಗೀಕರಿಸಿತು.

**10. 2024–25ನೇ ಸಾಲಿಗೆ ಆಡಳಿತ ಮಂಡಲಿ ಮಂಡಿಸಿರುವ ಅಂದಾಜು ಆಯ–ವ್ಯಯಗಳನ್ನು ಅಂಗೀಕರಿಸುವುದು ಮತ್ತು 2023–24ನೇ ಸಾಲಿನ ಅಂದಾಜಿಗಿಂತ ಹೆಚ್ಚುವರಿಯಾಗಿರುವ ಖರ್ಚುಗಳನ್ನು ಅಂಗೀಕರಿಸುವುದು.**

ಬ್ಯಾಂಕಿನ ನಿರ್ದೇಶಕರಾದ ಶ್ರೀ. ಪುಟ್ಟಮಾದಯ್ಯ ಬಿ. ರವರು 2023–24ನೇ ಸಾಲಿನ ಖರ್ಚುಗಳ ಬಗ್ಗೆ ವಿವರಣೆ ನೀಡಿ ಕೆಲವು ಮುಖ್ಯ ಖಾತೆಗಳಲ್ಲಿ (Head of A/cs) ಗಳಲ್ಲಿ ಅಂದಾಜು ವೆಚ್ಚಕ್ಕಿಂತ ಹೆಚ್ಚಿಗೆ ಖರ್ಚು ಮಾಡಿರುವುದರ ಬಗ್ಗೆ ಸೂಕ್ತ ವಿವರಣೆಯನ್ನು ನೀಡಿದರು. ಮುಂದುವರಿದು 2024–2025ನೇ ಸಾಲಿನ ಆಂದಾಜು ಆಯ–ವ್ಯಯಗಳ ವಿವರಣೆಯನ್ನು ಸಭೆಯ ಮುಂದೆ ಓದಿ ಹೇಳಿದರು. ಸಭೆಯು 2023–2024ನೇ ಸಾಲಿನ ಅಂದಾಜು ಆಯ–ವ್ಯಯಕ್ಕಿಂತ ಹೆಚ್ಚಾಗಿ ಖರ್ಚಾಗಿರುವ ಮತ್ತು 2024–2025ನೇ ಸಾಲಿನ ಅಂದಾಜು ಆಯ–ವ್ಯಯಗಳನ್ನು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಿತು.

**11. 2023–24ನೇ 2023–2024ನೇ ಸಾಲಿನ ಲೆಕ್ಕ ಪರಿಶೋಧಕರ ನೇಮಕವನ್ನು ಅನುಮೊದಿಸುವುದು ಮತ್ತು 2024–25 ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು.**

2023–24 ನೇ ಸಾಲಿಗೆ M N S & CO ರವರನ್ನು ಶಾಸನಬದ್ದ ಲೆಕ್ಕಪರಿಶೋಧಕರಾಗಿ ನೇಮಕ ಮಾಡಲಾಗಿತ್ತು ಈಗ ಅವರ ಅವದಿ 3 ವರ್ಷ ಮುಕ್ತಾಯವಾಗಿರುವುದರಿಂದ 2024–25ನೇ ಸಾಲಿಗೆ

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ:RBI/2021-22/25, Ref:No.Dos.CO.ARG/SEC.01/08.91.001/2021-22, Date:27.04.2021 ರಂತೆ ಬ್ಯಾಂಕಿನ ಶಾಸನ ಬದ್ಧ ಲೆಕ್ಕಪರಿಶೋಧಕರಾಗಿ ನೇಮಕ ಮಾಡಲು ದಿನಾಂಕ:28/06/2024 ರ ಆಡಳಿತ ಮಂಡಳಿ ಸಭೆಯು V.K. NIRANJAN & CO ರವರು ಭಾರತೀಯ ರಿಸರ್ವ್ ಬ್ಯಾಂಕ್ ರೂಪಿಸಿದ ಎಲ್ಲಾ ನಿಯಮಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಇವರನ್ನು 2024–25 ನೇ ಸಾಲಿಗೆ ಶಾಸನ ಬದ್ದ ಲೆಕ್ಕಪರಿಶೋಧಕರಾಗಿ ನೇಮಕ ಮಾಡಲಾಗಿದೆ ಇದಕ್ಕೆ ಸಭೆಯು ಅನುಮೋಧನೆ ನೀಡಲು ವಿನಂತಿಸಿಕೊಳ್ಳುತ್ತೇನೆ.

**12. ಬೈಲಾ ತಿದ್ದುಪಡಿಯ ಬಗ್ಗೆ.**

ಬೈಲಾ ತಿದ್ದುಪಡಿಯ ಕುರಿತು ಸಿ.ಈ.ಓ ರವರು ಈ ಕೆಳಕಂಡಂತೆ ಮಂಡಿಸಿದರು ನಂತರ ಸಭೆಯು ಬೈಲಾ ತಿದ್ದುಪಡಿಮಾಡಲು ಒಪ್ಪಿಗೆ ಸೂಚಿಸಿತು.

| ಹಾಲಿ ಬೈಲಾ | ತಿದ್ದುಪಡಿಯಾಗಬೇಕಾಗಿರುವುದು |
|---|---|
| ಷೇರುಗಳಿಗೆ ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾದಿಕಾರಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯೊಂದಿಗೆ ಕನಿಷ್ಟ ಒಂದು ಷೇರಿನ ಪೂರ್ಣ ಮೌಲ್ಯದೊಂದಿಗೆ ಷೇರು ಶುಲ್ಕ ಪ್ರತಿ ಷೇರಿಗೆ ರೂ.10/– ಗಳಂತೆ ಮತ್ತು ಪ್ರವೇಶ ಧನ ರೂ.50/– ಗಳಂತೆ ಪಾವತಿಸತಕ್ಕದ್ದು. ಈ ಷೇರು ಅರ್ಜಿಗಳನ್ನು ಮಂಡಲಿಯು ಅವು ಸ್ವೀಕೃತವಾದ ಎರಡು ತಿಂಗಳೊಳಗಾಗಿ ಇತ್ಯರ್ಥಗೊಳಿಸತಕ್ಕದ್ದು. | ಷೇರುಗಳಿಗೆ ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾದಿಕಾರಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯೊಂದಿಗೆ ಕನಿಷ್ಟ ಒಂದು ಷೇರಿನ ಪೂರ್ಣ ಬೆಲೆ ರೂ.100.00 ರಂತೆ ಕನಿಷ್ಟ 10 ಷೇರು ಮೌಲ್ಯದೊಂದಿಗೆ ಷೇರು ಶುಲ್ಕ ಪ್ರತಿ ಷೇರಿಗೆ ರೂ.10/– ಗಳಂತೆ ಮತ್ತು ಪ್ರವೇಶ ಧನ ರೂ.50/– ಗಳಂತೆ ಪಾವತಿಸತಕ್ಕದ್ದು. ಈ ಷೇರು ಅರ್ಜಿಗಳನ್ನು ಮಂಡಲಿಯು ಅವು ಸ್ವೀಕೃತವಾದ ಎರಡು ತಿಂಗಳೊಳಗಾಗಿ ಇತ್ಯರ್ಥಗೊಳಿಸತಕ್ಕದ್ದು. |

**13. ಸದಸ್ಯರಿಂದ ಬಂದ ಸಲಹೆಗಳು ಮತ್ತು ವಿಷಯಗಳ ಪರಿಶೀಲನೆ.**

**1. ಸದಸ್ಯರಾದ ಶ್ರೀ. ರಘುಪತಿ ಡಿ.ಎ. ರವರು (ಸ.ಸಂಖ್ಯೆ:10522) ಬ್ಯಾಂಕಿಗೆ ಒಂದು ಪತ್ರ ನೀಡಿ ಪತ್ರದಲ್ಲಿ ಈ ಕೆಳಕಂಡಂತೆ ಪ್ರಶ್ನೆಗಳನ್ನು ಕೇಳಿರುತ್ತಾರೆ.**

1. **ವಿಷಯ:** 42ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸುಮಾರು ವಿಷಯಗಳನ್ನು ಚರ್ಚಿಸಿ, ಸರ್ವಸದಸ್ಯರ ಬೇಡಿಕೆಯಂತೆ ಕೆಲವು ಹಕ್ಕೊತ್ತಾಯಗಳ ಪ್ರಮುಖ ನಡವಳಿಗಳನ್ನು ಅನುಷ್ಠಾನಕ್ಕೆ ತರದೆ ಅವುಗಳನ್ನು ಇದುವರೆವಿಗೂ ದಾಖಲಿಸದೆ ಸರ್ವ ಸದಸ್ಯರ ತೀರ್ಮಾನಗಳನ್ನು ಕನಿಷ್ಠ ದಾಖಲಿಸದೆ ಇರುವುದರ ಬಗ್ಗೆ.

**ಉತ್ತರ:** ಅಧ್ಯಕ್ಷರು ಮಾತನಾಡಿ 42ನೇ ಸಭೆಯಲ್ಲಿ ಚರ್ಚಿಸಿದ ಎಲ್ಲಾ ವಿಷಯದ ಕುರಿತು ಕಾನೂನು ಸಲಹೆ ಪಡದೇ ನಾವು ನಿಯಮಾನುಸಾರ ಕೆಲಸ ನಿರ್ವಹಿಸಿದ್ದೇವೆ ಅಲ್ಲದೆ ಆ ನಡವಳಿ ಕುರಿತು ಕಾನೂನು ಸಲಹೆ ಕೇಳಿದಾಗ ಬ್ಯಾಂಕ್ ಒಂದು ಹಣಕಾಸು ವ್ಯವಹಾರ ನಡೆಯುವ ಸಂಸ್ಥೆ ಇಲ್ಲಿ ಯಾವುದೇ ಲೋಪದೋಷಗಳಿದ್ದರೆ ಲೆಕ್ಕಪರಿಶೋಧಕರು ಲೋಪದೋಷಗಳನ್ನು ನಮೂದಿಸುವ ಕೆಲಸ ಮಾಡಿರುತ್ತಾರೆ ಆದರೆ ಇಲ್ಲಿ ಬ್ಯಾಂಕಿಗೆ ಯಾವುದೇ ನಷ್ಟವಾಗಿರುವುದಿಲ್ಲ ಅಲ್ಲದೆ ಗ್ರಾಹಕರ ವೈಯಕ್ತಿಕ ವ್ಯವಹಾರಕ್ಕೂ ಬ್ಯಾಂಕಿಗೂ ಯಾವುದೇ ಸಂಭಂದ ಇರುವುದಿಲ್ಲ ಆದ್ದರಿಂದ ಬ್ಯಾಂಕಿನ ಠೇವಣಿದಾರರ ಹಿತಾಸಕ್ತಿ ದೃಷ್ಟಿಯಿಂದ ಯಾವುದೇ ದೂರು ನೀಡಲು ಬ್ಯಾಂಕಿಗೆ ಕಾನೂನಿನ ಪ್ರಕಾರ ಅವಕಾಶವಿರುವುದಿಲ್ಲ ಎಂದು ಹೇಳಿದರು.

2. ವಿಷಯ:–ಇದುವರೆವಿಗೂ ಸರ್ವಾನು ರೀತಿಯಲ್ಲಿ ಬ್ಯಾಂಕಿನ ರೀತಿ–ನೀತಿ, ಷರತ್ತುಗಳು ಹಾಗೂ ನಿಬಂಧನೆಗಳನ್ನು ಗಾಳಿಗೆ ತೂರಿ ಏಕ ಚಕ್ರಾದಿ ಪತ್ಯದ ರೀತಿಯಲ್ಲಿ ಬ್ಯಾಂಕಿಗೆ ವಂಚನೆ ಮಾಡಿ ಬ್ಯಾಂಕಿನ ಅಬಿವೃದ್ಧಿಗೆ ತಡೆಗೋಡೆಯಾಗಿ ಅದೋಗತಿಗೆ ತಳ್ಳಿದ ನಿರ್ದೇಶಕರುಗಳು ಯಾಕೆ ಇನ್ನು ರಾಜೀನಾಮೆ ಮಾಡಿಲ್ಲದಿರುವುದರ ಬಗ್ಗೆ.

**ಉತ್ತರ:** ಅಧ್ಯಕ್ಷರು ಯಾರೊಬ್ಬರು ನಿರ್ದೇಶಕರಾಗಲಿ, ಅಧ್ಯಕ್ಷರಾಗಲಿ ಬ್ಯಾಂಕಿಗೆ ವಂಚನೆ ಮಾಡಿರುವುದು ಆಡಿಟ್ ರಿಪೋರ್ಟಿನಲ್ಲಿ ವರದಿಯಾಗಿರುವುದಿಲ್ಲ ಮತ್ತು ಈಗಾಗಲೇ ಕಲಂ 64ರನ್ವಯ ವಿಚಾರಣೆ ನಡೆಯುತ್ತಿರುವುದರಿಂದ ಈ ಸಭೆಯಲ್ಲಿ ಅದನ್ನು ಚರ್ಚಿಸುವುದು ಅಪ್ರಸ್ತುತ.

3. ವಿಷಯ:–ಸರ್ವ ಸದಸ್ಯರುಗಳಲ್ಲಿ ಯಾರಿಗೆ ಸಾಲ ಸೌಲಭ್ಯ ಕಲ್ಪಿಸದೇ ಯಾರೋ ಮರುಪಾವತಿ ಮಾಡದಿರುವವರ ಮೇಲೆ ನೆಪವೊಡ್ಡಿ ನಿಜವಾದ ಫಲಾನುಭವಿಗಳಿಗೆ ಆರ್ಥಿಕ ಸಾಲ ಸೌಲಭ್ಯ ನೀಡದಿರವುದರ ಬಗ್ಗೆ.

**ಉತ್ತರ:** ಅಧ್ಯಕ್ಷರು ಮಾತನಾಡಿ ಸಾಲ ಮರುಪಾವತಿ ಮಾಡಲು ಅರ್ಹತೆ ಇರುವ ಎಲ್ಲಾ ಸದಸ್ಯರಿಗೆ ಸಾಲ ನೀಡಲಾಗುವುದು ಒಂದು ವೇಳೆ ಜಾಮೀನು ಸಾಲ ನೀಡಬೇಕಾದಲ್ಲಿ ಅವರು ಸರ್ಕಾರಿ ನೌಕರರಾಗಿದ್ದು ಅವರ ಮೇಲಾದಿಕಾರಿಗಳು ಸಂಭಳ ಕಡಿತದ ಅರ್ಜಿಗೆ ಸಹಿ ಮಾಡಿದಲ್ಲಿ ಅಂತಹವರಿಗೂ ಸಾಲ ನೀಡುತಿದ್ದೇವೆ ಎಂದು ಹೇಳಿದರು.

4. ವಿಷಯ:–ಕೆಲವು ನಿರ್ದೇಶಕರುಗಳ ಅಕ್ಷಮ ಹಾಗೂ ಅನೈತಿಕ ವಹಿವಾಟು, ಬ್ಯಾಂಕಿನ ಹಣಕಾಸಿನ ವ್ಯವಹಾರದಲ್ಲಿ ಅವ್ಯವಹಾರ ಮಾಡಿ ಇನ್ನೂ ನಿರ್ದೇಶಕರ ಹುದ್ದೆಗಳಲ್ಲಿ ಅಕ್ರಮವಾಗಿ ಮುಂದು ವರೆಯುತ್ತಿರುವವರ ಬಗ್ಗೆ.

**ಉತ್ತರ:** ಈಗಾಗಲೆ ತಿಳಿಸಿದಂತೆ 64ನೇ ವಿಚಾರಣೆ ನಂತರ ಕ್ರಮ ಕೈಗೊಳ್ಳುತ್ತೇವೆ.

5. **ವಿಷಯ:** ಅಕ್ರಮವಾಗಿ ಹಾಗೂ ಅನೈತಿಕವಾಗಿ ಕೆಲವರಿಗೆ ಆರ್ಥಿಕ ಸಾಲ ಸೌಲಭ್ಯ ನೀಡಿ ಅದರಲ್ಲಿ ಸ್ವಲಾಭ ಮಾಡಿಕೊಂಡು ಬ್ಯಾಂಕಿಗೆ ಮೋಸ ಮಾಡಿರುವುದರ ಜೊತೆಗೆ ಹಣವನ್ನು ವಸೂಲಿ ಮಾಡದೇ ವಿಳಂಬ ಮಾಡುತ್ತಿರುವುದರ ಬಗ್ಗೆ.

**ಉತ್ತರ:** ಇದಕ್ಕೆ ಉತ್ತರಿಸುತ್ತಾ ಬ್ಯಾಂಕಿನ ಅಧ್ಯಕ್ಷರು ಬ್ಯಾಂಕಿನಲ್ಲಿ ಅಕ್ರಮವಾಗಿ ಆಗಲಿ ಅಥವಾ ಅನೈತಿಕವಾಗಿ ಆಗಲಿ ಯಾರಿಗೂ ಸಾಲವನ್ನು ನೀಡಿರುವುದಿಲ್ಲ. ಎಲ್ಲಾ ಸಾಲಗಳನ್ನು ನಿಯಮ ಬದ್ಧವಾಗಿಯೆ ನೀಡಲಾಗಿರುತ್ತದೆ. ಮತ್ತು ಸಾಲದ ವಸೂಲಾತಿಗಾಗಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಹಾಗೂ ನಮ್ಮ ನಿವ್ವಳ ಎನ್.ಪಿ.ಎ. 0% ಇದೆ ಎಂದು ತಿಳಿಸಿದರು.

6. **ವಿಷಯ:** ಹಾಗೆಯೇ ಇನ್ನೂ ಅನೇಕ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡದೇ ಅರ್ಹತೆ ಇಲ್ಲದವರನ್ನು ಆಂತರಿಕ ಲೆಕ್ಕಪರಿಶೋಧಕರಾಗಿ ನೇಮಕ ಮಾಡಿರುತ್ತೀರಿ ಎಂದು ಕೇಳಿದರು.

**ಉತ್ತರ:** ನೌಕರರಿಗೆ ಮುಂಬಡ್ತಿ ನೀಡುವ ವಿಚಾರವನ್ನು ಮುಂದಿನ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು ಮತ್ತು ಸಿಬ್ಬಂದಿಗಳ ಯೋಗ್ಯತೆ ಅನುಸಾರವಾಗಿ ಹುದ್ದೆಗಳನ್ನು ನೀಡಲಾಗಿರುತ್ತದೆ.

7. **ವಿಷಯ:** ಬ್ಯಾಂಕು ಪ್ರಸ್ತುತ ಸಾಲಿನಲ್ಲಿ ನಿವ್ವಳ ಲಾಭ 83.33 ಗಳಿಸಿದ್ದು ಈಗ 2023–24ನೇ ಸಾಲಿಗೆ ನಿವ್ವಳ ಲಾಭ 75.03 ಲಕ್ಷ ವಿದೆ ಎಂದು ತಿಳಿಸಿದರು.

ಉತ್ತರ: ಈ ಪ್ರಶ್ನೆಗೆ ಉತ್ತರ ನೀಡುತ್ತಾ ಶ್ರೀ ಎಸ್. ಸಿದ್ದರಾಜರವರು ತಮ್ಮೆಲ್ಲರಿಗೂ ಗೊತ್ತಿರುವಂತೆ ಕಳೆದ ಸಾಲಿನಲ್ಲಿ ಅನೇಕ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ನಡೆದ ಕಹಿ ಘಟನೆಗಳಿಂದ ಎಲ್ಲಾ ಸಹಕಾರಿ ಬ್ಯಾಂಕುಗಳಲ್ಲಿ ಠೇವಣಿ ಕುಸಿತವಾಗಿರುತ್ತದೆ. ಅದೇ ರೀತಿ ನಮ್ಮ ಬ್ಯಾಂಕಿನಲ್ಲಿಯೂ ಸಹ ಠೇವಣಿ ಕುಸಿತ ಕಂಡು ಬಂದಿರುತ್ತದೆ. ಇದರ ಪರಿಣಾಮ ದಿಂದಾಗಿ ಲಾಭಾಂಶದಲ್ಲೂ ಸಹ ಕುಸಿತ ಕಂಡು ಬಂದಿರುತ್ತದೆ.

ಮೇಲೆ ಹೇಳಿರುವ ಕಾರಣಗಳಿದ್ದರೂ ಸಹ ಮುಂದಿನ ದಿನಗಳಲ್ಲಿ ತಮ್ಮೆಲ್ಲರ ಸಹಕಾರದಿಂದ ಹೆಚ್ಚು ಠೇವಣಿಗಳನ್ನು ಸಂಗ್ರಹಿಸಿ ಹೆಚ್ಚು ಸಾಲ ನೀಡಿ ಲಾಭಾಂಶದಲ್ಲೂ ಸಹ ಗಣನೀಯ ಪ್ರಗತಿಯನ್ನು ಸಾದಿಸುತ್ತೇವೆ ಎಂದು ಉತ್ತರ ನೀಡಿದರು. ಇದಕ್ಕೆ ಸರ್ವಸದಸ್ಯರ ಸಭೆಯು ಚಪ್ಪಾಳೆ ಮೂಲಕ ತಮ್ಮ ಸಹಮತವನ್ನು ಮತ್ತು ಅಬಿನಂದನೆಗಳನ್ನು ಸಲ್ಲಿಸಿದರು.

**2. ಸದಸ್ಯರಾದ ಶ್ರೀ ಶಿವಲಿಂಗಸ್ವಾಮಿ ಸದಸ್ಯತ್ವ ಸಂಖ್ಯೆ –4551) ಬ್ಯಾಂಕಿಗೆ ಒಂದು ಪತ್ರ ನೀಡಿ ಪತ್ರದಲ್ಲಿ ಈ ಕೆಳಕಂಡಂತೆ ಪ್ರಶ್ನೆಗಳನ್ನು ಕೇಳಿರುತ್ತಾರೆ.**

1. **ವಿಷಯ:** 42ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕೆಲವು ವಿಷಯಗಳನ್ನು ಅಂಗೀಕರಿಸಿದ ಪ್ರಮುಖ ನಡವಳಿಗಳನ್ನು ಕಾರ್ಯರೂಪಕ್ಕೆ ತರದೆ ಮತ್ತುಅವುಗಳನ್ನು ದಾಖಲಿಸದೆ ಇರುವ ಬಗ್ಗೆ ಚರ್ಚೆ

**ಉತ್ತರ:** ಈಗಾಗಲೆ ಈ ಪ್ರಶ್ನೆಗೆ ಉತ್ತರ ನೀಡಲಾಗಿದೆ ಹಾಗು ಕಾನೂನಿನಲ್ಲಿ ಬ್ಯಾಂಕಿಗೆ ವಂಚನೆಯಾಗಿದ್ದಲ್ಲಿ ಮಾತ್ರ ನಾವು ಸಕ್ಷಮ ಪ್ರಾದಿಕಾರಕ್ಕೆ ದೂರು ನೀಡಬಹುದು ಇಲ್ಲಿ ಬ್ಯಾಂಕಿಗೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ ಆದ್ದರಿಂದ ಬ್ಯಾಂಕಿಗೆ ಕಾನೂನಿನ ಪ್ರಕಾರ ದೂರು ನೀಡಲು ಅವಕಾಶವಿರುವುದಿಲ್ಲ ಎಂದು ಹೇಳಿದರು.

2. **ವಿಷಯ:** ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ W.P.No. 1397/2024 ಮತ್ತು W.P.No. 2190/24 ಮತ್ತು R.P. No. 82/84 ದಾವೆಗಳ ಬಗ್ಗೆ ಚರ್ಚೆ.

**ಉತ್ತರ:** ಸಿ.ಈ.ಓ ರವರು ಮಾತನಾಡಿ ಈಗಾಗಲೆ ಸದರಿ ಪ್ರಕರಣಗಳು ಮುಕ್ತಾಯವಾಗಿವೆ ಅಲ್ಲದೆ 4200 ಅನರ್ಹ ಮತದಾರರಲ್ಲಿ ಕೇವಲ ಕೆಲವೇ ಮಂದಿ ನ್ಯಾಯಾಲಯಕ್ಕೆ ನಮ್ಮ ವಿರುದ್ದ ಮತದಾನದ ಹಕ್ಕು ಕೋರಿ ಮೇಲ್ಮನವಿ ಸಲ್ಲಿಸಿದ್ದರು ಆದರೆ ಅವರ ಅರ್ಜಿ ಪುರಸ್ಕೃತವಾಗದಿರುವುದರಿಂದ ನಾವು ಅರ್ಹ ಮತದಾರರ ಪಟ್ಟಿಯಂತೆ ಚುನಾವಣೆ ನಡೆಸಿ ಆಡಳಿತ ಮಂಡಳಿ ರಚಿಸಿದ್ದೇವೆ ಎಂದು ಹೇಳಿದರು.

3.**ವಿಷಯ:** 2024ರಲ್ಲಿ ನಡೆದ ಆಡಳಿತ ಮಂಡಳಿಯ ಚುನಾವಣೆಗೆ ಕೆಲವೇ ಸದಸ್ಯರಿಗೆ ಮತ ನೀಡುವ ಅವಕಾಶವನ್ನು ಮುಖ್ಯ ಉಚ್ಚ ನ್ಯಾಯಾಲಯದಲ್ಲಿ ಆದೇಶ ಪಡೆದು W.P.No. 1397/2024, 272 ಸದಸ್ಯರಿಗೆ ಮಾತ್ರ W.P.No. 2190/24, 82 ಸದಸ್ಯರಿಗೆ ಮಾತ್ರ ಅವಕಾಶ ಪಡೆದಿರುತ್ತೀರಿ. ಎರಡರ ಪಟ್ಟಿಯಲ್ಲಿರುವ ಸದಸ್ಯರಲ್ಲಿ 110 ಜನ ಸದಸ್ಯರು ಅನರ್ಹರಿರುತ್ತಾರೆ. ಈ ಎರಡು ಪಟ್ಟಿಯನ್ನು ತಯಾರಿಸಿ ಮುಖ್ಯ ಚುನಾವಣಾದಿಕಾರಿಗೆ ಅನುಮೋದನೆ ಕಳುಹಿಸಿರುವುದಾಗಿ ಸಿ.ಇ.ಓ.ರವರು ಸಭೆಯಲ್ಲಿ ಮಂಡಿಸಿ ಇದರ ದೃಢೀಕೃತ ಪ್ರತಿಗಾಗಿ ಮನವಿ ಮತ್ತು ಇದಕ್ಕೆ ಕಾರಿಣೆ ಭೂತರಾದವರ ವಿರುದ್ಧ ಸೂಕ್ತ ಕ್ರಮದ ಬಗ್ಗೆ ಚರ್ಚೆ.

**ಉತ್ತರ:** ಸಿ.ಈ.ಓ ರವರು ಮಾತನಾಡಿ ನಾವು ಬ್ಯಾಂಕಿನಿಂದ ಯಾರಿಗೂ ಚುನಾವಣೆಯಲ್ಲಿ ಮತದಾನ ನೀಡಿ ಎಂದು ಎಲ್ಲೂ ಸಹ ದಾವೆ ಹೂಡಿರುವುದಿಲ್ಲ ಆದ್ದರಿಂದ ತಾವು ದಾವೆ ಹೂಡಿದವರೊಂದಿಗೆ ಚರ್ಚಿಸಿ ತಮ್ಮ ಗೊಂದಲ ಪರಿಹರಿಸಿಕೊಳ್ಳಬಹುದು ಸದರಿ ದಾವೇ ಹೂಡಿದವರಿಗೂ ಬ್ಯಾಂಕಿಗೂ ಯಾವುದೇ ಸಂಭಂದ ಇರುವುದಿಲ್ಲ.

4.**ವಿಷಯ:** ಬ್ಯಾಂಕಿನ ಕಾರ್ಯದರ್ಶಿ ಸಿ.ಈ.ಓ. ಮತ್ತು ಸಲಹೆಗಾರರು ಈ ಬ್ಯಾಂಕಿನ ದುರಾಡಳಿತಕ್ಕೆ ಕಾರಣವಾಗಿರುವುದರಿಂದ ಇವರನ್ನು ವಜಾಗೊಳಿಸುವ ಬಗ್ಗೆ ಚರ್ಚೆ.

**ಉತ್ತರ:** ಮೇಲೆ ಕೇಳಿರುವ ಪ್ರಶ್ನೆಗೆ ಅಧ್ಯಕ್ಷರು ಉತ್ತರಿಸುತ್ತಾ ಬ್ಯಾಂಕಿನ ಸಿ.ಈ.ಓ.ರವರನ್ನು ಕಾನೂನು ಬದ್ಧವಾಗಿ ಮತ್ತು ಕ್ರಮಬದ್ಧವಾಗಿ ನೇಮಕ ಮಾಡಲಾಗಿರುತ್ತದೆ. ಅದಲ್ಲದೇ ಇವರ ಮೇಲೆ ಯಾವುದೇ ತರಹದ ದುರಾಡಳಿತದ ಆರೋಪಗಳಿಗೆ ಪೂರವೆಗಳಾಗಲಿ ಅಥವಾ ದಾಖಲೆಗಳಾಗಲಿ ಇರುವುದಿಲ್ಲ.

ಆದುದರಿಂದ ತಮ್ಮ ಸಲಹೆ ಮೇರೆಗೆ ಯಾವುದೇ ಆಧಾರ ರಹಿತ ಆಪಾದನೆಗಳನ್ನು ಪರಿಗಣಿಸಿ ಇವರನ್ನು ಕೆಲಸದಿಂದ ವಜಾ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದರು, ಮತ್ತು ಮುಂದುವರೆದು ಈಗಿರುವ ಸಲಹೆಗಾರರನ್ನು ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಬ್ಯಾಂಕಿಗೆ ಇವರ ಸೇವೆಯ ಅವಶ್ಯಕತೆ ಇರುವುದನ್ನು ಮನಗಂಡು ಒಮ್ಮತದಿಂದ ನೇಮಕ ಮಾಡಲಾಗಿರುತ್ತದೆ. ಇವರ ಮೇಲೆ ಸಹ ಯಾವುದೇ ತರಹದ ದುರಾಡಳಿತದ ಆಪಾದನೆಗಳು ಇರುವುದಿಲ್ಲವಾದ್ದರಿಂದ ಇವರನ್ನು ಸಹ ತಮ್ಮ ಸಲಹೆ ಮೇರೆಗೆ ಸೇವೆಯಿಂದ ತೆಗೆಯಲು ಸಾಧ್ಯವಾಗುವುದಿಲ್ಲವೆಂದು ತಿಳಿಸುತ್ತಾ ಸರ್ವಸದಸ್ಯರ ಸಭೆಯಲ್ಲಿ ಬ್ಯಾಂಕಿನ ಹಿರಿಯ ಅದಿಕಾರಿಗಳ ಮೇಲೆ ಆಗಲಿ ಹಾಗೂ ನಿರ್ದೇಶಕರ ಮೇಲೆ ಆಗಲಿ ಆಧಾರ ರಹಿತ ಆಪಾದನೆಗಳನ್ನು ಮಾಡಬಾರದೆಂದು ಸದಸ್ಯರಾದ ಶ್ರೀ ಶಿವಲಿಂಗಸ್ವಾಮಿರವರಿಗೆ ಸೂಚನೆ ನೀಡಿದರು.

5. **ವಿಷಯ:** ಶ್ರೀಮತಿ ಡಾ॥ ಹರ್ಷಿತ ಗಾಂದಿ ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ದಾಖಲಿಸಿ ಆದೇಶ ಪಡೆದಿರುವ W.P.No. 10545/2024 ಇದರ ಆದೇಶದಂತೆ ಕ್ರಮ ತೆಗೆದುಕೊಳ್ಳದಿರುವ ಬಗ್ಗೆ ಚರ್ಚೆ,

**ಉತ್ತರ:** ಈ ಕುರಿತು ಅವರೇ ಮಾತನಾಡಲಿ ಇದಕ್ಕು ನಿಮಗು ಸಂಭಂದವಿಲ್ಲ ಎಂದು ಹೇಳಿದರು.

6. ಕಾನೂನು ಶುಲ್ಕ 2023/24ಕ್ಕೆ ರೂ. 4,00,511–00, ಸರ್ವ ಸದಸ್ಯರ ಮಹಾಸಭೆಯ ಖರ್ಚು 2023/24 ರೂ. 9,12,103–00, ಹೆಚ್.ಬಿ.ಆರ್.ಬಡಾವಣೆಯ ಕಟ್ಟಡ ಉಧ್ಘಾಟನೆಗೆ ರೂ. 3,46,720–00, ಚುನಾವಣಾ ವೆಚ್ಚ ರೂ. 13,26,917–00, ಜಾಹಿರಾತು ವೆಚ್ಚ ರೂ. 1,68,846–00

**ಉತ್ತರ:** ನಿರ್ದೇಶಕರಾದ ಶ್ರೀ.ಎಸ್.ಸಿದ್ದರಾಜರವರು ದಾಖಲೆಗಳೊಂದಿಗೆ ಸಭೆಗೆ ಉತ್ತರ ನೀಡಿದರು.

7. **ವಿಷಯ:** ಭದ್ರತಾ ವೆಚ್ಚ ರೂ. 12,11,063–00

**ಉತ್ತರ:** ಅಧ್ಯಕ್ಷರು ಮಾತನಾಡಿ ಬ್ಯಾಂಕಿನ 8 ಜನ ಸೆಕ್ಯೂರಿಟಿ ಗಾರ್ಡ್‌ಗಳಿಗೆ ಸಂಬಳ ನೀಡುತ್ತಿರುವುದರಿಂದ ಸದರಿ ವೆಚ್ಚವಾಗಿದೆ ಅಲ್ಲದೆ 2023–24 ನೇ ಸಾಲಿನಲ್ಲಿ ಸುಸ್ತಿದಾರರಾದ ದಿ.ಹುಚ್ಚಯ್ಯರವರ ಸ್ತಿರಾಸ್ಥಿ ಹರಾಜು ಮಾಡುವ ಮೊದಲು ಬ್ಯಾಂಕು ಕಟ್ಟಡ ವಶಪಡಿಸಿಕೊಂಡ ದಿನಾಂಕದಿಂದ ಹರಾಜು ನಡೆಯುವವರೆಗೂ ಹೆಚ್ಚುವರಿ ಸೆಕ್ಯೂರಿಟಿ ಗಾರ್ಡ್ ನೇಮಿಸಿಕೊಂಡಿರುವುದರಿಂದ ವೆಚ್ಚವಾಗಿದೆ ಎಂದು ಉತ್ತರ ನೀಡಿದರು.

8. **ವಿಷಯ:** ಸ್ಥಿರಾಸ್ತಿ ಸಾಲದಲ್ಲಿ ಅಕ್ರಮವಾಗಿ ಕಮಿಷನ್ ಪಡೆದಿರುವ ಬಗ್ಗೆ ತನಿಕೆ ನಡೆಯುತ್ತಿರುವ ಇಂತಹ ಸಂದರ್ಭದಲ್ಲಿ ಮಾಜಿ ಅಧ್ಯಕ್ಷ ಹಾಲಿ ನಿರ್ದೇಶಕ ಶ್ರೀ ಎಸ್. ಸಿದ್ದರಾಜರವರಿಗೆ ಲೋನ್ ಕಮಿಟಿಯಲ್ಲಿ ಸ್ಥಾನ ನೀಡಿರುವ ಬಗ್ಗೆ ಚರ್ಚೆ.

**ಉತ್ತರ:** ವರದಿ ಬಂದ ನಂತರ ವರದಿಯ ಆಧಾರದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

9. **ವಿಷಯ:** ಹಾಲಿ ಆಡಳಿತ ಮಂಡಳಿಯ ಸದಸ್ಯರುಗಳು ಹಿಂದೆ ನ್ಯಾಯಾಲಯದಲ್ಲಿ ಹೂಡಿದ ದಾವೆಯನ್ನು ಹೊಂದಾಣಿಕೆ ಮಾಡಲು ಕೆಲವು ನಿರ್ದೇಶಕರು ನನಗೆ ರೂ.5.00 ಲಕ್ಷ ಆಮಿಷ ಒಡ್ಡಿದ್ದರು ಎಂದು ಹೇಳಿದರು.

ಉತ್ತರ:ನಿರ್ದೇಶಕರಾದ ನಂದಕುಮಾರ್.ಎಂ.ಸಿ ರವರು ಮಾತನಾಡಿ ನನಗೆ ಹಿಂದೆ ಇದೇ ಶಿವಲಿಂಗಸ್ವಾಮಿರವರು ರೂ.5.00 ಲಕ್ಷ ನೀಡಿದರೆ ನಿಮ್ಮನ್ನು ಅಧ್ಯಕ್ಷರನ್ನಾಗಿ ಮಾಡುಲು ದೊಡ್ಡೀರಯ್ಯ ತಂಡದೊಂದಿಗೆ ಮಾತನಾಡುವುದಾಗಿ ನನಗೆ ಆಮಿಷ ಒಡ್ಡಿದರು ಎಂದು ಹೇಳಿದರು ನಂತರ ಅಧ್ಯಕ್ಷರು ಮಾತನಾಡುತ್ತಾ ಇದು ವಾರ್ಷಿಕ ಮಹಾಸಭೆ ಆಗಿರುವುದರಿಂದ ಯಾರ ಮೇಲೂ ಸಹ ಸದಸ್ಯರುಗಳು ಸೂಕ್ತ ದಾಖಲೆಗಳಿಲ್ಲದೆ ಯಾರ ಮೇಲೆ ಸಹ ವೈಯಕ್ತಿಕ ಆಪಾದನೆಗಳನ್ನಾಗಲಿ, ತೇಜೋವದೆ ಮಾಡುವುದಕ್ಕೆ ಈ ಸಭೆಯಲ್ಲಿ ಅವಕಾಶ ಇರುವುದಿಲ್ಲ ಎಂದು ಹೇಳಿದರು.

**3.(ಬಿ.ಹೆಚ್. ಚಂದ್ರಶೇಖರ ಸದಸ್ಯತ್ವ ಸಂಖ್ಯೆ 159)**

1. ತಮ್ಮಲ್ಲಿ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಆನಂದ ಕೋ-ಆಪರೇಟಿವ್ ಬ್ಯಾಂಕಿನ ಬೆಳವಣಿಗೆ ಪ್ರಗತಿ ರಹಿತವಾಗಿದೆ, 43ವರ್ಷಗಳಿಂದಲೂ ಸಾಗುತ್ತಿರುವ ಈ ಬ್ಯಾಂಕ್‌ನ ಬೆಳವಣಿಗೆ ಬೇಸರ ತರಿಸುತ್ತಿದೆ. ಬೆಂಗಳೂರು ನಗರ ಜಿಲ್ಲೆಯ ನೂರಾರು ಸಹಕಾರಿ ಬ್ಯಾಂಕ್‌ಗಳಿಗೆ ಹೋಲಿಸಿದಾಗ ನಮ್ಮ ಬ್ಯಾಂಕ್‌ಗಿಂತಲೂ ಹಲವಾರು ಕ್ರೆಡಿಟ್ ಕೋ-ಆಪರೇಟಿವ್ ಸೋಸೈಟಿಗಳು ನಮಗಿಂತಲ್ಲೂ ಉತ್ತಮ ಬೆಳವಣಿಗೆಯನ್ನು ಹೊಂದಿರುತ್ತದೆ. ನಮ್ಮದು ಕೋ-ಆಪರೇಟಿವ್ ಬ್ಯಾಂಕ್ ಆಗಿದ್ದರೂ, 2023-24ನೇ ಸಾಲಿನ ವಾರ್ಷಿಕ ವರದಿಯು ಅತೀ ಕೆಳಹಂತದಲ್ಲಿರುವುದು ಕಾಣುತ್ತಿದೆ. ಯಾವುದೇ ಸಹಕಾರಿ ಬ್ಯಾಂಕ್ ವಾರ್ಷಿಕ ಕನಿಷ್ಠ 10% ವೃದ್ಧಿಯಾಗುತ್ತಿದ್ದರೆ ಮಾತ್ರ ಬೆಳೆಯುತ್ತದೆ ಎಂದು ತಿಳಿಯಬಹುದು ನಾನು ಇಲ್ಲಿ ಹೆಚ್ಚುಅಂಕಿ ಅಂಶಗಳೊಡನೆ ವಿವರಿಸುವ ಬದಲು ಸಾಮಾನ್ಯ ಲೆಕ್ಕಚಾರಗಳಿಂದ ನೋಡಿದರೂ ಬ್ಯಾಂಕ್ ಕಳೆದ ಸಾಲಿನಲ್ಲಿ, ಷೇರು ಬಂಡವಾಳ, ಠೇವಣಿ, ದುಡಿಯುವ ಬಂಡವಾಳ, ಸಾಲ ಮತ್ತು ಮುಂಗಡ, ನಿವ್ವಳ ಲಾಭ, ಇತ್ಯಾದಿಗಳಿಂದ ಹಿನ್ನೆಡೆಯಾಗಿದೆ. ಇದರ ಜೊತೆಯಲ್ಲಿ ಸುಸ್ತಿ ಸಾಲದ ಪ್ರಮಾಣ ಕ್ರಮೇಣ ಹೆಚ್ಚಾಗುತ್ತಿದೆ. ಸಾಲದ ವಸೂಲಾತಿಯೂ ಕಡಿಮೆಯಾಗುತ್ತಿದೆ. (ಇಲ್ಲಿ ಯಾವುದೇ ಅಂಕಿಅಂಶಗಳನ್ನು ನಮೂದಿಸಿರುವುದಿಲ್ಲ). ನನ್ನ ಅಂಕಿಅಂಶದ ಪ್ರಕಾರ, ಪ್ರಾಮಾಣಿಕವಾಗಿ ಹಾಗೂ ಸಾದಾರಣವಾಗಿ ಬ್ಯಾಂಕ್ ನಡೆಸಿದ್ದರೆ 2024ರ ಸಾಲಿನ ಹೊತ್ತಿಗೆ ಸುಮಾರು 160-170 ಕೋಟಿ ರೂಪಾಯಿಗಳಾಗ ಬೇಕಿತ್ತು. ನಿರ್ದೇಶಕರಾದವರು ಬ್ಯಾಂಕಿಗೆ ಹೆಚ್ಚಿನ ಠೇವಣಿ ತರುವುದು ಜೊತೆಯಲ್ಲಿ ಸರಿಯಾದ ಹೂಡಿಕೆ, ಸರಿಯಾದ ಸಾಲ ಮುಂಗಡ ಹಾಗೂ ಸಾಲ ಮರುಪಾವತಿಯ ಬಗ್ಗೆ ಪ್ರತಿಯೊಬ್ಬ ನಿರ್ದೇಶಕರೂ, ಕಾರ್ಯದರ್ಶಿ ಹಾಗೂ ಅಡ್‌ವೈಜರ್ ಇವರೂ ಕೂಡ ಹೆಚ್ಚು ನಿಗಾ

ವಹಿಸಬೇಕಾಗಿತ್ತು. ಬ್ಯಾಂಕಿನ ಅಬಿವೃದ್ಧಿ ಸರಿಯಾಗಿಲ್ಲ ಎಂಬುದು ನಿಮ್ಮ ವಾರ್ಷಿಕ ವರದಿಯಲ್ಲೇ ತಿಳಿಯುತ್ತದೆ.

**ಉತ್ತರ:** ಚಂದ್ರಶೇಖರ್. ಬಿ.ಹೆಚ್ ರವರ ಸಲಹೆಯಂತೆ ಬ್ಯಾಂಕಿನ ಸರ್ವತೋಮುಖ ಅಬಿವೃದ್ದಿಗೆ ಪ್ರಾಮಾಣಿಕವಾಗಿ ಆಡಳಿತ ಮಂಡಳಿ ಕೆಲಸ ನಿರ್ವಹಿಸಲಾಗುವುದು ಎಂದು ಹೇಳಿದರು.

2. ಬ್ಯಾಂಕಿನ ಈ ವ್ಯವಹಾರಕ್ಕೆ ಸೂಕ್ತ ಲಾಭ ಬಂದಿರುವುದಿಲ್ಲ ಅನಗತ್ಯ ವೆಚ್ಚಗಳನ್ನು ಕಾಣಬಹುದು. ಬಸವೇಶ್ವರನಗರ ಶಾಖೆಯಲ್ಲಿ ವಿಸ್ತಾರ ಜಾಗ ವಿದ್ದರೂ ಸೂಕ್ತ ಬಳಕೆಯಾಗದೆ ವಿನಾಕಾರಣ ಹೆಚ್ಚು ಬಾಡಿಗೆಯನ್ನು ಕಟ್ಟುತ್ತಿದ್ದೇವೆ. ಉಳಿಕೆ ಜಾಗವನ್ನು ಮಾಲೀಕರಿಗೆ ಒಪ್ಪಿಸಿ ಅಥವಾ ಆ ಜಾಗಕ್ಕೆ ಬೇರೆಯವರಿಗೆ ಬಾಡಿಗೆ ಕೊಟ್ಟು ಬಾಡಿಗೆ ಕಡಿಮೆ ಮಾಡಿಸುವ ಕಾರ್ಯವು ಆಡಳಿತ ಮಂಡಳಿಗೆ ಸಾಧ್ಯವಾಗಿಲ್ಲ. ತಿಂಗಳಿಗೆ ನನಗೆ ತಿಳಿದಂತೆ 85000/– ರೂಪಾಯಿಗಳು ಈ ಶಾಖೆಗೆ ಖರ್ಚಾಗುತ್ತಿದೆ. ಇದರ ಬಗ್ಗೆ ನಿರ್ದೇಶಕರು ತುರ್ತು ಗಮನ ಹರಿಸಿ, ವೆಚ್ಚ ಕಡಿಮೆ ಮಾಡಬೇಕು.

**ಉತ್ತರ:** ಅಧ್ಯಕ್ಷರು ಮಾತನಾಡಿ ಹಿಂದೆ ಬಸವೇಶ್ವರನಗರ ಶಾಖೆಯ ಕಟ್ಟಡ ಮಾಲಿಕರೊಂದಿಗೆ ಚರ್ಚಿಸಿ ಪತ್ರಿಕೆಯಲ್ಲಿ ಕಟ್ಟಡದ ಅರ್ಧ ಬಾಡಿಗೆಗೆ ದೊರೆಯುವುದಾಗಿ ಪ್ರಕಟಣೆ ನೀಡಲಾಗಿದೆ ಆದರೆ ಯಾರು ಬಾಡಿಗೆ ಪಡೆಯಲು ಬರದೇ ಇದ್ದಕಾರಣ ಹಾಗು ಬೇರೆ ಕಟ್ಟಡ ಪರಿಶೀಲಿಸಿದಾಗ ಈಗ ಇರುವ ಬಾಡಿಗೆಗಿಂತ ಇನ್ನು ಹೆಚ್ಚುವರಿ ಬಾಡಿಗೆ ನಿಗದಿಯಾದ ಹಿನ್ನೆಲೆಯಲ್ಲಿ ಇದೇ ಕಟ್ಟಡದಲ್ಲಿ ಮುಂದುವರೆಯುತಿದ್ದೇವೆ ಎಂದು ವಿವರಣೆ ನೀಡಿದರು.

3. ಬ್ಯಾಂಕಿನ ಎಲ್ಲಾ ಶಾಖೆಗಳ ಲಾಕರ್ (ಭದ್ರತಾ ಲಾಕರ್ ) ಗಳ ಲೆಕ್ಕವನ್ನು ತಿಳಿಸಬೇಕು, ಅದಕ್ಕೆ ಆಗಿರುವ ವೆಚ್ಚ, ಅದರಿಂದ ಮಾಸಿಕ / ವಾರ್ಷಿಕ ಬಾಡಿಗೆ ರೂಪದಲ್ಲಿ ಬಂದಿರುವ ಮೊತ್ತ ಹಾಗೂ ಎಷ್ಟು ಲಾಕರ್‌ಗಳು ಖಾಲಿ ಇವೆ ಎಂಬುದನ್ನು ತಿಳಿಸಬೇಕು, ಹೆಚ್.ಬಿ.ಆರ್. ಲೇಔಟ್ ಬ್ಯಾಂಕಿನ ಕಟ್ಟಡಕ್ಕೆ ಇದುವರೆಗೂ ಆಗಿರುವ ಎಲ್ಲಾ ಖರ್ಚು ವೆಚ್ಚಗಳನ್ನು ಸರ್ವಸದಸ್ಯರ ಸಭೆಯಲ್ಲಿ ಸದಸ್ಯರಿಗೆ ತಿಳಿಸಬೇಕು. ಒಟ್ಟಿನಲ್ಲಿ ಬ್ಯಾಂಕಿನ ವರಮಾನ ನಿರೀಕ್ಷಿತ ಮಟ್ಟದಲ್ಲಿ ಇಲ್ಲ ಹಾಗೂ ಮುಂದೆ ಇದನ್ನು ಸರಿಪಡಿಸಿ ಬ್ಯಾಂಕ್ ಹೆಚ್ಚಿನ ಪ್ರಗತಿಹೊಂದ ಬೇಕೆಂದು ಬ್ಯಾಂಕಿನ ಒಬ್ಬ ಸದಸ್ಯನಾಗಿ ಆಶಿಸುತ್ತೇನೆ.

**ಉತ್ತರ:** ಅಧ್ಯಕ್ಷರು ಮಾತನಾಡಿ ಹಿಂದೆ ಬ್ಯಾಂಕಿನಲ್ಲಿ ಒಟ್ಟು 176 ಲಾಕರ್ ಇದ್ದು ಅದರಲ್ಲಿ 103 ಚಿಕ್ಕ ಲಾಕರ್‌ಗಳು ಮಾತ್ರ ಖಾಲಿ ಇರುತ್ತವೆ ಅದನ್ನು ಬರ್ತಿಮಾಡಲು ಶಾಖಾ ವ್ಯವಸ್ಥಾಪಕರಿಗೆ ಸೂಚನೆ ನೀಡಿದ್ದೇವೆ

ಅಲ್ಲದೆ ಹೆಚ್.ಬಿ.ಆರ್ ಕಟ್ಟಡಕ್ಕೆ ರೂ.96.00 ಲಕ್ಷ ವೆಚ್ಚವಾಗಿದೆ ಎಂದು ಹೇಳಿ ಚಂದ್ರಶೇಖರ್. ಬಿ.ಹೆಚ್ ರವರ ಸಲಹೆಯಂತೆ ಬ್ಯಾಂಕಿನ ಸರ್ವತೋಮುಖ ಅಬಿವೃದ್ದಿಗೆ ಪ್ರಾಮಾಣಿಕವಾಗಿ ಆಡಳಿತ ಮಂಡಳಿ ಕೆಲಸ ನಿರ್ವಹಿಸುತ್ತಿದೆ ಎಂದು ಹೇಳಿದರು.

**14. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು:**

**1. ಶ್ರೀ. ಸಿದ್ದರಾಜು.ಡಿ. ಸದಸ್ಯತ್ವ ಸಂಖ್ಯೆ 9469**

1. **ವಿಷಯ:** ಶ್ರೀ.ಸಿದ್ದರಾಜು.ಡಿ. ಸದಸ್ಯತ್ವ ಸಂಖ್ಯೆ 9469 ಅವರು ಮಾತನಾಡಿ ಬ್ಯಾಂಕಿನಲ್ಲಿ ಅವ್ಯವಹಾರ ಮಾಡಿದ್ದರೆ ಇದರ ವಿರುದ್ಧ ಹೋರಾಟ ಮಾಡಲು ಹಾಗು ಬ್ಯಾಂಕಿನಲ್ಲಿ 5 ಲಕ್ಷ ಸಾಲ ನೀಡಲು ಸುಮಾರು 70 ಜನರಿಂದ ನಾನು ಚಂದ್ರಶೇಖರಯ್ಯರವರು ನೀಡಿದ ಪತ್ರಕ್ಕೆ ಸಹಿ ಮಾಡಿಸಿ ಕೊಟ್ಟಿದ್ದೇನೆ ಈಗ ಅದಕ್ಕೆ ಚಂದ್ರಶೇಖರಯ್ಯರವರು ಉತ್ತರ ನೀಡಬೇಕು ಎಂದು ಕೇಳಿದರು.

ಉತ್ತರ: ನಿರ್ದೇಶಕರಾದ ಶ್ರೀ.ಎಸ್.ಸಿದ್ದರಾಜರವರು ಮಾತನಾಡಿ ಈ ಹಿಂದೆ ಶ್ರೀ. ಚಂದ್ರಶೇಖರಯ್ಯರವರು ನನ್ನ ವಿರುದ್ಧ ಆರೋಪ ಮಾಡಿರುವುದರಿಂದ ಅವರೆ ಸಾಬೀತು ಮಾಡಬೇಕು ಎಂದು ಹೇಳಿದರು. ನಂತರ ಅಧ್ಯಕ್ಷರು ಮಾತನಾಡಿ ಈಗಾಗಲೆ ಇಲಾಖೆಯಲ್ಲಿ ಕಂ–64 ರ ಅಡಿಯಲ್ಲಿ ವಿಚಾರಣೆ ನಡೆಯುತ್ತಿದೆ ವಿಚಾರಣಾ ವರದಿ ಬಂದ ನಂತರ ಈ ಕುರಿತು ಕ್ರಮ ಕೈಗೊಳ್ಳಲು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು.

2. **ವಿಷಯ:** ಎ.ಎಂ.ಸಿ. ಶಾಖೆಯ ಸಿಬ್ಬಂದಿಗಳಿಗೆ ಸಾಲವನ್ನು ಹೆಚ್ಚುವರಿ ಕೊಡಬೇಕೆಂದು ಕೇಳಿದರು.

**ಉತ್ತರ:** ಅಧ್ಯಕ್ಷರು ಮಾತನಾಡಿ ರಿಸರ್ವ್ ಬ್ಯಾಂಕಿನ ನಿಯಮದ ಪ್ರಕಾರ ಠೇವಣಿ 100 ಕೋಟಿ ದಾಟಿದರೆ ನಾವು ಜಾಮೀನು ಸಾಲವನ್ನು maximum 5 ಲಕ್ಷದವರೆವಿಗೂ ಹೆಚ್ಚವರಿ ನೀಡಬಹುದು ಎಂದು ಸಭೆಗೆ ತಿಳಿಸಿದರು.

**2. ಸಿದ್ದಪ್ಪ ಸದಸ್ಯತ್ವ ಸಂಖ್ಯೆ 9285**

(1) ಶ್ರೀ ಸಿದ್ದಪ್ಪ ಸದಸ್ಯತ್ವ ಸಂಖ್ಯೆ 9285 ರವರು ಮಾತನಾಡಿ ನೀವು ಪೂಜೆ ಮಾಡುವುದನ್ನು ಬಿಡಬೇಕು ಅಂಬೇಡ್ಕರನ್ನು ಪೂಜಿಸಿ ಎಂದು ತಿಳಿಸಿದರು ಹಾಗೂ ಇಲ್ಲಿ ಮಹಿಳಾ ನಿರ್ದೇಶಕರು ಯಾರು ಇಲ್ಲ ಎಂದು ಕೇಳಿದರು.

**ಉತ್ತರ:** ಅಧ್ಯಕ್ಷರು ಮಾತನಾಡಿ ಮಹಿಳಾ ನಿರ್ದೇಶಕರಾಗಿ ಶ್ರೀಮತಿ ಅರುಂಧತಿ.ಎಲ್ ಹಾಗೂ ಶ್ರೀಮತಿ ಅನಿತಾ ರವರು ಆಯ್ಕೆಯಾಗಿದ್ದರು. ಆದರೆ ಶ್ರೀಮತಿ.ಅರುಂಧತಿ ಎಲ್ ರವರು ಅನಾರೋಗ್ಯದ ಕಾರಣ ಅವರು ಸಾಮಾನ್ಯ ಸಭೆಗೆ ಹಾಜರಾಗಿರುವುದಿಲ್ಲ, ಅಲ್ಲದೆ ಶ್ರೀಮತಿ ಅನಿತಾ ರವರು ರಾಜಿನಾಮೆ ನೀಡಿರುವುದರಿಂದ ಆ ಒಂದು ಸ್ಥಾನ ಖಾಲಿ ಇರುವುದಾಗಿ ಸಭೆಗೆ ತಿಳಿಸಿದರು.

(2) **ವಿಷಯ:** ನಮ್ಮ ಬ್ಯಾಂಕಿನಲ್ಲಿ ನೀವು ಡಿವಿಡೆಂಡ್ 9% ನೀಡುತ್ತಿದ್ದೀರಿ ಬೇರೆ ಬ್ಯಾಂಕಿನಲ್ಲಿ ಜಾಸ್ತಿ ನೀಡುತ್ತಿದ್ದಾರೆ. ಆದ್ದರಿಂದ ಮುಂದಿನ ವರ್ಷ ನೀವು 18% ಡಿವಿಡೆಂಟ್ ನೀಡಬೇಕು ಎಂದು ತಿಳಿಸಿದರು.

**ಉತ್ತರ:** ಅಧ್ಯಕ್ಷರು ಮಾತನಾಡಿ ನಿಮ್ಮ ಸಲಹೆ ಸೂಚನೆಗಳ ಬಗ್ಗೆ ನಿಯಮಾವಳಿ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸಭೆಗೆ ತಿಳಿಸಿದರು.

**3. ಕೇಶವ ಮೂರ್ತಿ ಸದಸ್ಯತ್ವ ಸಂಖ್ಯೆ 5848**

(1) ಶ್ರೀ ಕೇಶವ ಮೂರ್ತಿ ಸದಸ್ಯತ್ವ ಸಂಖ್ಯೆ 5848ಈಗ ಮಹಾಸಭೆಯಲ್ಲಿ ಪ್ರಯಾಣ ಭತ್ಯೆ 200/– ನೀಡುತ್ತಿರುವುದನ್ನು ರೂ. 500/– ನೀಡಬೇಕೆಂದು ತಿಳಿಸಿದರು.

**ಉತ್ತರ:** ಅಧ್ಯಕ್ಷರು ಮಾತನಾಡಿ ನಿಮ್ಮ ಸಲಹೆ ಸೂಚನೆಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸಭೆಗೆ ತಿಳಿಸಿದರು.

(2) ವಿಷಯ: ನೀವು ಪೋಸ್ಟ್ ಚಾರ್ಜಸ್ ಕಡಿಮೆ ಮಾಡಬೇಕು ಡಿಜಿಟಲ್ ಮಾಡಿ ಎಂದು ತಿಳಿಸಿದರು

**ಉತ್ತರ:** ಅಧ್ಯಕ್ಷರು ಮಾತನಾಡಿ ಸಹಕಾರ ಕಾಯ್ದೆಯಂತೆ ಕಡ್ಡಾಯವಾಗಿ ಪೋಸ್ಟ್ ಕಳುಹಿಸಲೇಬೇಕು ಇನ್ನು ಮುಂದೆ ಎಲ್ಲಾ ಸದಸ್ಯರಿಗೆ ಅವರು ನೊಂದಾಯಿಸಿದ ಮೊಬೈಲ್ ಸಂಖ್ಯೆಗೆ ಮಾಹಿತಿ ನೀಡಲು ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದರು ಮುಂದುವರೆದು ಡಾ॥ ರಾಜ ಜೆ ಅವರು ಮಾತನಾಡಿ ಸದಸ್ಯರುಗಳು ಮೊದಲು ಮೊಬೈಲ್ ಸಂಖ್ಯೆಯನ್ನು ಬ್ಯಾಂಕಿನಲ್ಲಿ UPDATE ಮಾಡಿಕೊಂಡರೆ ಡಿಜಿಟಲ್ ಮಾಡಬಹುದು ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲವೆಂದು ಸಭೆಗೆ ತಿಳಿಸಿದರು.

(3) **ವಿಷಯ:** ಕಳೆದ ಸಾಮಾನ್ಯ ಸಭೆಯಲ್ಲಿ ಎ.ಟಿ.ಎಮ್ ಕಾರ್ಡ್ ಬಗ್ಗೆಕೇಳಿದರು ಹಾಗೂ ವಾರ್ಷಿಕ ವರದಿ ಪುಸ್ತಕದಲ್ಲಿ ಕಾಗುಣಿತ ತಪ್ಪಿದೆ ಎಂದು ತಿಳಿಸಿದರು.

**ಉತ್ತರ:** ಅಧ್ಯಕ್ಷರು ಮಾತನಾಡಿ ನಿಮ್ಮ ಸಲಹೆಯಂತೆ ಈ ವರ್ಷದಲ್ಲಿ ಎ.ಟಿ.ಎಂ ಸೌಲಭ್ಯಕ್ಕೆ ಅಗತ್ಯ ಕ್ರಮ ಕೈಗೊಳ್ಳಲು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಅಲ್ಲದ ಪುಸ್ತಕದಲ್ಲಿ ಕಾಗುಣಿತದ ತಪ್ಪನ್ನು ಸರಿಪಡಿಸಿಕೊಳ್ಳಲಾಗುವುದು ಎಂದು ಹೇಳಿದರು.

**4. ಶ್ರೀಮತಿ ಹರ್ಷಿತ ಗಾಂಧಿ**

(1) **ವಿಷಯ:** ಶ್ರೀಮತಿ ಹರ್ಷಿತ ಗಾಂಧಿ ಯವರು ಮಾತನಾಡಿ ಶ್ರೀಮತಿ.ಅನಿತಾ ಮಾಜಿ ನಿರ್ದೇಶಕರು ಕಳೆದ 5 ವರ್ಷದ ಹಿಂದೆ ಕೋರ್ಟ್‌ನಲ್ಲಿ ಪರ್ಮಿಷನ್ ತೆಗೆದುಕೊಂಡಿರಲಿಲ್ಲ ಅದಕ್ಕೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಹಾಗೂ 7 ತಿಂಗಳು ಆಗುತ್ತಾ ಬಂದಿದೆ ಚುನಾವಣೆ ಇನ್ನೂ ಆಗಿಲ್ಲ ಎಂದು ಕೇಳಿದರು.

**ಉತ್ತರ:** ಅಧ್ಯಕ್ಷರು ಮತ್ತು ನಿರ್ದೇಶಕರಾದ ಎಸ್.ಸಿದ್ದರಾಜ ರವರು ಮಾತನಾಡಿ ಶ್ರೀಮತಿ. ಅನಿತಾರವರು ಸಹಕಾರ ಚುನಾವಣೆಯಲ್ಲಿ ಸ್ಪರ್ದಿಸಲು ಅವರು ಕೆಲಸ ಮಾಡುತ್ತಿರುವ ಇಲಾಖೆಇಂದ ಅನುಮತಿ ಪಡೆಯಬೇಕು ಎಂದು ಸಹಕಾರ ಕಾಯ್ದೆಯಲ್ಲಿ ಎಲ್ಲೂ ಉಲ್ಲೇಖವಾಗಿಲ್ಲ ಈ ಕುರಿತು ನಮಗೆ ಯಾವುದೇ ಸೂಚನೆಗಳಿರುವುದಿಲ್ಲ. ಈಗ ತಾವು ನ್ಯಾಯಾಲಯದಲ್ಲಿ ಕೆ.ಸಿ.ಎಸ್ ನಿಯಮದಂತೆ ಅನುಮತಿ ಪಡೆಯಬೇಕು ಎಂದು ದಾವೆ

ಹೂಡಿರುವುದರಿಂದ ಅವರು ರಾಜೀನಾಮೆ ನೀಡಿದ್ದಾರೆ ಇವರು ರಾಜಿನಾಮೆಯನ್ನು ಅಂದಿನ ಆಡಳಿತಾದಿಕಾರಿಯವರು ಅಂಗೀಕಾರ ಮಾಡಿ ಇಲಾಖೆಗೆ ಪತ್ರ ಬರೆದಿದ್ದಾರೆ ಆದರೆ ಈ ಕುರಿತು ಇದುವರೆವಿಗೂ ಇಲಾಖೆಯಿಂದ ಚುನಾವಣೆ ನಡೆಸುವ ಕುರಿತು ಯಾವುದೇ ಸ್ಪಷ್ಟ ನಿರ್ದೇಶನ ಬಂದಿರುವುದಿಲ್ಲ ಇಲಾಖೆಯಿಂದ ಚುನಾವಣೆಯನ್ನು ನಡೆಸಲು ಸ್ಪಷ್ಟ ನಿರ್ದೇಶನ ಬಂದ ನಂತರ ನಿರ್ದೇಶಕರಾಗಿದ್ದ ದಿ.ಗಂಗಾಧರಯ್ಯ ಮತ್ತು ಮಹಿಳಾ ಮೀಸಲಾತಿ ಕ್ಷೇತ್ರಕ್ಕೆ ಚುನಾವಣೆ ನಡೆಸಲಾಗುವುದು ಎಂದು ಉತ್ತರ ನೀಡಿದರು.

**5. ಶ್ರೀ ಉಮಶಂಕರ್ ವೈ.ಎಂ. ಸದಸ್ಯತ್ವ ಸಂಖ್ಯೆ : 10788**

(1) ಶ್ರೀ ಉಮಶಂಕರ್ ವೈ.ಎಂ. ಸದಸ್ಯತ್ವ ಸಂಖ್ಯೆ : 10788 ಮಾತನಾಡಿ ಅಂಗವಿಕಲರಿಗೆ ಪ್ರೋತ್ಸಹ ಧನ ನೀಡಬೇಕೆಂದು ಸಲಹೆ ಸೂಚನೆ ನೀಡಿದರು.

**ಉತ್ತರ:** ಅಧ್ಯಕ್ಷರು ಮಾತನಾಡಿ ನಿಮ್ಮ ಸಲಹೆ ಸೂಚನೆಗಳ ಬಗ್ಗೆ ಕ್ರಮ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸಭೆಗೆ ತಿಳಿಸಿದರು.

**15. ವಂದನಾರ್ಪಣೆ:**

ಬ್ಯಾಂಕಿನ ನಿರ್ದೇಶಕರಾದ ಶ್ರೀ. ಚಂದ್ರಶೇಖರಯ್ಯರವರು ವಂದನಾರ್ಪಣೆ ಮಾಡುತ್ತಾ ಪ್ರಸಕ್ತ ಸಾಲಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಮಾರ್ಗದರ್ಶನಕ್ಕಾಗಿ ಬ್ಯಾಂಕಿನ ಆಡಳಿತ ಮಂಡಳಿಯು ಅಭಾರಿಯಾಗಿರುತ್ತದೆ. ಶಾಸನಬದ್ಧ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರು, ಬ್ಯಾಂಕಿನ ಕಾನೂನು ಸಲಹೆಗಾರರು, ಕಟ್ಟಡ ಮೌಲ್ಯ ನಿರ್ಣಯಕಾರರು, ಆಭರಣ ಮೌಲ್ಯಮಾಪಕರು, ಕಂಪ್ಯೂಟರ್ ನಿರ್ವಹಣೆಯ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಕಂಪನಿಯ ಎಲ್ಲಾ ಅಧಿಕಾರಿ ವರ್ಗದವರಿಗೆ,ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದ ಎಲ್ಲಾ ಸದಸ್ಯ ಬಂಧುಗಳಿಗೆ ಹಾಗು ಆಡಳಿತ ಮಂಡಲಿಯ ಎಲ್ಲಾ ನಿರ್ದೇಶಕರುಗಳಿಗೆ, ಸಲಹೆಗಾರರಿಗೆ, ಬ್ಯಾಂಕಿನ ಸಿಬ್ಬಂದಿ ವರ್ಗದವರ ಪ್ರಾಮಾಣಿಕ ಸೇವೆಯನ್ನು ಕೂಡ ಈ ಸಂದರ್ಭದಲ್ಲಿ ನೆನೆಯುವುದು ತೀರಾ ಅಗತ್ಯ, ಗ್ರಾಹಕರಿಗೂ, ಹಿತೈಷಿಗಳಿಗೂ, ಹಾಗು ಪ್ರತ್ಯಕ್ಷ ಹಾಗು ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಹನೀಯರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದರು ಸಭೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದಕ್ಕೆ ಸಭೆಯು ಶಾಂತಿಯುತವಾಗಿ ನಡೆಯುವಲ್ಲಿ ಸಹಕರಿಸಿದ ಎಲ್ಲಾ ಪೋಲೀಸ್ ಸಿಬ್ಬಂದಿಯವರಿಗೂ, ಬೆಸ್ಕಾಂ ಸಿಬ್ಬಂದಿಯವರಿಗೂ ಬಿ.ಬಿ.ಎಂ.ಪಿ ಅದಿಕಾರಿ ಮತ್ತು ಸಿಬ್ಬಂದಿಯವರಿಗೂ ಧನ್ಯವಾದಗಳನ್ನು ತಿಳಿಸಿದರು.

**ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು**

| | |
|---|---|
| ಸಹಿ/– | ಸಹಿ/– |
| **ಕಾರ್ಯದರ್ಶಿ** | **ಅಧ್ಯಕ್ಷರು** |

# ಆನಂದ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ : ನಂ. 116, 1ನೇ ಮಹಡಿ, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020

## 2024–2025ನೇ ಸಾಲಿನ ವಾರ್ಷಿಕ ವರದಿ

**ಮಾನ್ಯ ಸದಸ್ಯರೇ**

ವರ್ಷದ ಸದಾಕಾಲವೂ ಅತ್ಯುತ್ತಮ ಹವಾಗುಣವನ್ನು ಹೊಂದಿ ಉದ್ಯಾನ ನಗರವಾಗಿ ಬೆಳೆಯುತ್ತಿರುವ ಈ ಬೆಂಗಳೂರು ನಗರದ ಹೆಮ್ಮೆಯ ನಿವಾಸಿಗಳಾಗಿರುವ ಹಾಗೂ ಈ ಪ್ರತಿಷ್ಠಿತ ಬ್ಯಾಂಕಿನ ಸದಸ್ಯರುಗಳಾಗಿರುವ ತಮ್ಮನ್ನು ಬ್ಯಾಂಕಿನ 44ನೇ ಸರ್ವಸದಸ್ಯರ ಸಾಮಾನ್ಯ ಮಹಾಸಭೆಗೆ ಆತ್ಮೀಯವಾಗಿ ಸ್ವಾಗತಿಸುತ್ತಾ, 2024–2025ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು ಆಡಳಿತ ಮಂಡಲಿ ಪರವಾಗಿ ತಮ್ಮ ಮುಂದಿಡಲು ಹರ್ಷಿಸುತ್ತೇನೆ. ಯಾವುದೇ ವ್ಯಕ್ತಿಗೆ ಸಮಾಜದಲ್ಲಿ ಸೂಕ್ತ ಸ್ಥಾನಮಾನ ಲಭ್ಯವಾಗಬೇಕಾದಲ್ಲಿ ಇಂತಹ ಸಾರ್ವಜನಿಕ ಸಂಸ್ಥೆಗಳನ್ನು ಕಟ್ಟಿ ಬೆಳೆಸುವುದು ಅತಿ ಮುಖ್ಯವಾಗಿರುತ್ತದೆ. ಇಂತಹ ಒಂದು ಸಂಸ್ಥೆ ನೂರಾರು ಸ್ಥಿತಿವಂತ ಗಣ್ಯ ವ್ಯಕ್ತಿಗಳಿಗಿಂತಲೂ ಹೆಚ್ಚಿನದಾಗಿರುತ್ತದೆ. ಆದ್ದರಿಂದ ಈ ಪ್ರತಿಷ್ಠಿತ ಬ್ಯಾಂಕನ್ನು ಪ್ರಗತಿಯತ್ತ ಸಾಗುವಂತೆ ಮಾಡಲು ಪ್ರತಿಯೊಬ್ಬ ಸದಸ್ಯರೂ ಸಹ ಶ್ರಮಿಸಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

**2. ಚಿರಸ್ಮರಣೆ :**

ನಮ್ಮ ಬ್ಯಾಂಕಿನ ಸದಸ್ಯರಾಗಿದ್ದ ಕೆಳಕಂಡ ಸದಸ್ಯರು ವರದಿ ಸಾಲಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಹಾಗೂ ಅವರ ಕುಟುಂಬ ವರ್ಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ.

| ಕ್ರ. ಸಂ. | ದೈವಾಧೀನರಾದವರ ಹೆಸರು | ಸದಸ್ಯತ್ವದ ಸಂಖ್ಯೆ |
|---|---|---|
| 1 | ಸೋಮಶೇಖರ | ಎ. 2053 |
| 2 | ನರಸಮ್ಮ | ಆರ್. 7465 |
| 3 | ರಮೇಶ್ ಎಂ. | ಆರ್. 8571 |
| 4 | ನಾಗರತ್ನಮ್ಮ | ಆರ್. 10606 |
| 5 | ಲಿಂಗರಾಜು ಟಿ. | ಆರ್. 6655 |
| 6 | ಜಯರಾಮ ಸಿ. | ಆರ್. 6196 |
| 7 | ರಂಗಯ್ಯ ಹೆಚ್. | ಆರ್. 4855 |
| 8 | ಸಿದ್ಧರಾಜು ಬಿ. | ಆರ್. 2012 |
| 9 | ರಾಜಾ ಎ | ಆರ್. 7500 |

| ಕ್ರ. ಸಂ. | ದೈವಾಧೀನರಾದವರ ಹೆಸರು | ಸದಸ್ಯತ್ವದ ಸಂಖ್ಯೆ |
|---|---|---|
| 10 | ಜಯರಾಮನ್ ಎಂ. | ಆರ್. 5310 |
| 11 | ಗಂಗಾಧರಯ್ಯ | ಆರ್. 730 |
| 12 | ದಾಸ್ ಎಂ. | ಆರ್. 1049 |
| 13 | ದಾಸಯ್ಯ | ಆರ್. 3895 |
| 14 | ಎಂ.ಸಿ. ಚೂಡರತ್ನ | ಆರ್. 2520 |
| 15 | ಕೆಂಪರಾಜು ಬಿ. | ಆರ್. 9845 |
| 16 | ಮಹೇಂದ್ರ | ಆರ್. 4412 |
| 17 | ರಾಚಯ್ಯ ಆರ್. | ಆರ್. 4750 |
| 18 | ಗುರುಸಿದ್ಧಯ್ಯ ಎಂ. | ಆರ್. 6638 |
| 19 | ವೆಂಕಟೇಶ್ ಎಸ್. | ಆರ್. 8991 |
| 20 | ಭಗವಾನ ಜಿ. | ಆರ್. 10359 |
| 21 | ಟಿ. ಕಮಲ | ಆರ್. 1222 |

### 3. ಸದಸ್ಯತ್ವ ಮತ್ತು ಷೇರು ಬಂಡವಾಳ

ದಿನಾಂಕ : 31–03–2025ರ ಅಂತ್ಯಕ್ಕೆ ಬ್ಯಾಂಕ್ 8592 ಜನ ಸದಸ್ಯರನ್ನು ಹೊಂದಿರುತ್ತದೆ. ವರದಿ ಸಾಲಿನ ಸದಸ್ಯರ ಸಂಖ್ಯೆಯನ್ನು ಹೋಲಿಕೆಯೊಂದಿಗೆ ಪರಿಶೀಲಿಸಲಾಗಿ ವಿವರಗಳು ಈ ಕೆಳಕಂಡಂತಿರುತ್ತದೆ.

### 2024–25ನೇ ಸಾಲಿಗೆ ಸದಸ್ಯತ್ವದ ವಿವರ

(ರೂ. ಲಕ್ಷಗಳಲ್ಲಿ)

| | 1–4–2024 ರಲ್ಲಿದ್ದಂತೆ | ಪ್ರಸಕ್ತ ಸಾಲಿನಲ್ಲಿ | | 31–03–2025 ರಲ್ಲಿದ್ದಂತೆ |
|---|---|---|---|---|
| | | ಹೊಸ ಸೇರ್ಪಡೆ | ಸದಸ್ಯತ್ವರದ್ದು | |
| ಸಂಖ್ಯೆ | 8,453 | 227 | 88 | 8,592 |
| ಮೊತ್ತ | 299.56 | 15.40 | 18.63 | 296.33 |

ದಿನಾಂಕ : 31–3–2025ರ ಅಂತ್ಯಕ್ಕೆ ಬ್ಯಾಂಕು ತನ್ನ ಸ್ವಂತ ಬಂಡವಾಳವಾಗಿ ಹಣದ ರೂಪದಲ್ಲಿ ಒಟ್ಟು ರೂ.2,96,33,700ಗಳ ಷೇರು ಬಂಡವಾಳ ಬ್ಯಾಂಕಿಗೆ ಸಂಗ್ರಹಣೆಯಾಗಿರುತ್ತದೆ.

**4. ಆಪದ್ಧನ ಮತ್ತು ಇತರೇ ನಿಧಿಗಳು :**

ಆಪದ್ಧನ ಮತ್ತು ಇತರೇ ನಿಧಿಗಳ ಮೊತ್ತವು ಈ ಕೆಳಕಂಡಂತೆ ಇದ್ದು ಹೆಚ್ಚಳ ಕಂಡುಬರುತ್ತದೆ.

(ರೂ. ಲಕ್ಷಗಳಲ್ಲಿ)

| ವಿವರಗಳು | 31–3–2024 ರಲ್ಲಿದ್ದಂತೆ | 31–3–2025 ರಲ್ಲಿದ್ದಂತೆ |
|---|---|---|
| ಆಪದ್ಧನ | 337.45 | 479.29 |
| ಕರಡು ಮತ್ತು ಸಂಶಯಾತ್ಮಕ ಸಾಲ ನಿಧಿ | 246.54 | 249.30 |
